# 21

# ಹರಡುತ್ತಿರುವ ಜ್ವಾಲೆ

# (8:1-40)

ಅಪೊಸ್ತಲರ ಕೃತ್ಯಗಳು ಅಧ್ಯಾಯ 7 ಸ್ತೇಫನನಿಗೆ ಕಲ್ಲೆಸೆಯುವ ಘಟನೆಯಿಂದ ಮುಕ್ತಾಯಗೊಳ್ಳುತ್ತದೆ. ಸ್ತೇಫನನಿಗೆ ಈ ಮರಣದ ಫಲಿತಾಂಶವು ಸಿಂಹಾಸನಾರೋಹಣದ ಉತ್ಸವವಾಗಿತ್ತು. ಯೆಹೂದಿ ನ್ಯಾಯಮಂಡಲಿಗೆ ಇದು ದೂಷಣೆಯನ್ನು ಹೊಂದುವ ಫಲಿತಾಂಶವಾಗಿತ್ತು.[1] ಸೌಲನಿಗೋ ಅದರ ಪರಿಣಾಮವು ಮನಸಾಕ್ಷಿಯ ಚುಚ್ಚವಿಕೆಯೇ ಆಗಿತ್ತು. ಸಭೆಗೆ, ಇದರ ಪರಿಣಾಮವು ಕೊನೆಗೂ ಅದರ ನಿಯೋಗದ ನೆರವೇರಿಯುಕೆಯೇ ಆಗಿತ್ತು.

ಯೇಸು ಅಪೊಸ್ತಲರಿಗೆ "ಲೋಕದೊಳಕ್ಕೆ ಹೋಗಿರಿ ಮತ್ತು *ಎಲ್ಲಾ* ರಾಷ್ಟ್ರಗಳವರನ್ನು ನನ್ನ ಶಿಷ್ಯರನ್ನಾಗಿ ಮಾಡಿರಿ" ಎಂಬ ಸವಾಲನ್ನು ಕೊಟ್ಟಿದ್ದನು (ಮಾರ್ಕ 16:15; ಮತ್ತಾಯ 28:19; ಒತ್ತಿ ಹೇಳಿದ್ದು ನನ್ನದು). "ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಗಳಲ್ಲಿಯೂ ನೀವು ನನ್ನ ಸಾಕ್ಷಿಗಳಾಗಿರಬೇಕು" (1:8) ಎಂದು ಆತನು ಹೇಳಿದನು. ಸಭೆಯು ಕೇವಲ ಒಂದು ಪಟ್ಟಣದ ಧಾರ್ಮಿಕ ಸಮಾಜ ಆಗಿರುವುದನ್ನು ಎಂದು ಯೇಸು ಬಯಸಿರಲಿಲ್ಲ. 7ನೆಯ ಅಧ್ಯಾಯದ ಕೊನೆಯ ಭಾಗದಲ್ಲಿ, ಹೇಗೋ, ಅನೇಕ ವರ್ಷಗಳು ಸಂದುಹೋದವು,[2] ಮತ್ತು ಸಭೆಯು ಇನ್ನೂ ಯೆರೂಸಲೇಮಿನಲ್ಲಿಯೇ ಮಾತ್ರ ಮೂಲತಹವಾಗಿ ಉಳಿದುಕೊಂಡಿತ್ತು.[3]

ಅಪೊಸ್ತಲರು ಯಾಕೆ ಯೇಸುವಿನ ಕಾರ್ಯಕ್ರಮದ ಎರಡನೆಯ ಹಂತದಲ್ಲಿ ಸಾಗಲಿಲ್ಲ? ಅವರು ಆತನ ನಿಬಂಧನೆಗಳನ್ನು ಅರ್ಥಮಾಡಿಕೊಳ್ಳಲಿಲ್ಲವೇ? ತಮ್ಮ ಕ್ಷೇತ್ರವನ್ನು ವಿಸ್ತರಿಸುವ ಮುನ್ನ ಯೆರೂಸಲೇಮಿನಲ್ಲಿ ಮಾಡಬೇಕಾದುದು ಇನ್ನೂ ಬಹಳ ಉಳಿದಿದೆ ಎಂದು ಯೋಚಿಸಿದ್ದರೋ? (ನಾನು ಊಹಿಸುತ್ತೇನೆ ಪೇತ್ರನು ದಿಂಬಿಗೆ ತನ್ನ ತಲೆಯನ್ನು ಒರಗಿಸಿ ಸಂಕಟಪಡುತ್ತಾ ತನ್ನ ಹೆಂಡತಿಗೆ ಹೀಗೆ ಹೇಳಿರಬಹುದು: "ಕೇವಲ ಯೆರೂಸಲೇಮಿನಲ್ಲಿ ಮಾತ್ರ ಸಭೆಯೊಂದಿಗೆ ಇರಲು ಪ್ರಯತ್ನಿಸುತ್ತಿರುವದು ನನಗೆ ಬೇಸರ ತರಿಸಿದೆ! ಸಭೆಯು ಜಗತ್ತೆಲ್ಲವನ್ನು ಪಸರಿಸಿದರೆ ಹೇಗಾಗಿರುತ್ತದೆ ಎಂದು ನೀನು ಊಹಿಸಬಲ್ಲೆಯಾ?") ಕಾರಣವು ಏನೇ ಇರಲಿ, ಸಂಪೂರ್ಣ ಜಗತ್ತಿಗೆ ಸುವಾರ್ತೆಯನ್ನು ಕೊಂಡೊಯ್ಯುವ ಯೇಸುವಿನ ಯೋಜನೆಯು ಮಾತ್ರ ಕೈಗೂಡಲಿಲ್ಲ.

ಈ ಒಂದು ಯೋಗ್ಯವಾದ ಸಮಯದಲ್ಲಿ ದೇವರು ಮಧ್ಯಪ್ರವೇಶಿಸಿದನು ಮತ್ತು, ಇದರ ಪರಿಣಾಮವಾಗಿ, "*ಇದೇ ಸಮಯ* - ಸುವಾರ್ತೆಯು ಯೆರೂಸಲೇಮಿನಿಂದ ಹೊರಗೆ ಹೋಗುವ ಸುಸಮಯ ಇದಾಗಿದೆ" "ಮತ್ತು ಆ ದಿವಸದಲ್ಲಿ ಯೆರೂಸಲೇಮಿನಲ್ಲಿದ್ದ ಸಭೆಗೆ ದೊಡ್ಡ ಹಿಂಸೆ ಉಂಟಾಯಿತು; ಅಪೊಸ್ತಲರ ಹೊರತಾಗಿ ಎಲ್ಲರೂ ಯೂದಾಯ ಸಮಾರ್ಯ ಸೀಮೆಗಳಲ್ಲಿ ಚದುರಿ ಹೋದರು" (8:1). ನಾವು ಇಲ್ಲಿ ಹಗುರವಾಗಿ ಹೆಜ್ಜೆ ಇಡಬೇಕು. ದೇವರು ಹಿಂಸೆಯನ್ನು *ಪ್ರೇರೇಪಿಸಲಿಲ್ಲ*; ಸೈತಾನನು ಅದರ ಹಿಂದೆ ಇದ್ದನು, ಧರ್ಮಾಂಧತೆಯಿಂದ ಕೂಡಿದ ಸೌಲನು ಆತನ ಆಯುಧವಾಗಿದ್ದಾನೆ - ಆದರೆ ದೇವರ ಅದನ್ನೇ ಉಪಯೋಗಿ ಸಿದನು. ನಾನು ಬಾಲಕನಾಗಿದ್ದಾಗ ಅಮೇರಿಕವು ಅಂತರಾಷ್ಟ್ರೀಯ ಕಾದಾಟದ IIನೇಯ ಮಹಾಯುದ್ಧದ ಒಂದು ಭಾಗವಾಗಿತ್ತು. ಸಾವಿರಾರು ಜನರು ಪ್ರಾಣವನ್ನು ತೆಗೆದುಕೊಂಡ ಆ ಭಯಂಕರವಾದ ಸಂಘರ್ಷಕ್ಕೆ ದೇವರು ಜವಾಬ್ದಾರನೆಂದು

ಯಾರೋಬ್ಬರೂ ಹೇಳ ಅಲ್ಲ, ಆದರೆ ಅಮೇರಿಕದಲ್ಲಿ ಚರ್ಚಿನ ಮಿಶನರಿಯ ಶಕ್ತಿಯನ್ನು ಜಾಗೃತಗೊಳಿಸಲು ದೇವರು ಈ ಯುದ್ಧವನ್ನು ಬಳಸಿಕೊಂಡನು ಕ್ರೈಸ್ತ ಸೇವಕರು ದೂರದೂರ ಪ್ರದೇಶಗಳಲ್ಲಿ ಇರುವ ಸೌವಾರ್ತಿಕ ಅವಶ್ಯಕತೆಯನ್ನು ಮನೆಗಳಿಗೆ ತೆರಳಿ ಹೇಳ ತೊಡಗಿದರು. ಅನೇಕರು ತಮ್ಮನ್ನು ಸಿದ್ಧಪಡಿಸಿಕೊಂಡರು ಮತ್ತು ತಾವು ಯುದ್ಧ ಮಾಡಬೇಕಾದ ಸ್ಥಳಕ್ಕೆ ಕ್ರಿಸ್ತನ ಸ್ವಸ್ಥತೆಯ ಸುವಾರ್ತೆಯನ್ನು ತೆಗೆದುಕೊಂಡು ತೆರಳಿದರು. ಹಾಗೆಯೇ ದೇವರು ಸ್ತೇಫನನು ಮರಣಹೊಂದಿದಾಗ ಎದ್ದಂತಹ ಹಿಂಸೆಯನ್ನು ಸಹ ಸಕಾರಾತ್ಮಕವಾಗಿ *ಬಳಸಿಕೊಂಡನು.* ಸೈತಾನನು ಸಭೆಯನ್ನು ನಾಶಮಾಡಲೆಂದು ಹಿಂಸೆಯನ್ನು ಸೃಷ್ಟಿಸಿದನು; ದೇವರು ಅದನ್ನೇ ಸಭೆಯನ್ನು ಹರಡಿಸಲು ಬಳಸಿದನು.

ಅಪೊಸ್ತಲರ ಕೃತ್ಯಗಳು 8ರ ಮೊದಲ ಭಾಗದಲ್ಲಿ ಏನು ಸಂಭವಿಸಿದೆ ಎಂಬುದರ ಮೇಲೆ ಅನೇಕ ಹೋಲಿಕೆಗಳು ಸೂಚಿಸಲ್ಪಟ್ಟಿವೆ. ಒಬ್ಬರು ವಿವರಿಸಿ ಹೇಳುವಂತೆ, ಸಭೆಯು ಯೆರೂಸಲೇಮಿನಲ್ಲಿ ಒಂದು ಸೀಸದಲ್ಲಿ ತುಂಬಲ್ಪಟ್ಟ ಹಾಗೆ ಇತ್ತು. ಸೌಲನು ಸಭೆಯನ್ನು ನಾಶಮಾಡುವ ಪ್ರಯತ್ನವು ಆ ಸೀಸವನ್ನು ಒಡೆಯಿತು, ಮತ್ತು ಸಭೆಯು ಪ್ರತಿಯೊಂದು ದಿಕ್ಕಿನಲ್ಲಿ ಹರಿಯಿತು. ಇನ್ನೊಬ್ಬರು ಸೂಚಿಸುವುದೇನೆಂದರೆ ಗಾಳಿಯು ಬೀಸಿದಾಗ ಬೀಜಗಳು ಹರಡಿ[4] ದೊಡ್ಡ ಸುಗ್ಗಿಯನ್ನು ತರುವಂತೆ ಸೌಲನ ಹಿಂಸೆಯೂ ಕೂಡ ಸಭೆಯೊಡನೆ ಹಾಗೆಯೇ ಮಾಡಿತು. ಇದು ಎಲ್ಲಡೆ ಪಸರಿಸಿತು ಮತ್ತು ದೊಡ್ಡ ಸುಗ್ಗಿಯನ್ನು ಉಂಟುಮಾಡಿತು. ಬಹುಶಃ ಒಂದು ಒಳ್ಳೆಯ ದೃಷ್ಟಾಂತವೆಂದರೆ ಗ್ರೀಸ್ ಅಥವಾ ಎಣ್ಣೆಯ ಬೆಂಕಿಯ ಆರಿಸಲು ಪ್ರಯತ್ನಿಸುವುದೇ ಆಗಿದೆ. ಇಂಥ ಬೆಂಕಿಯಲ್ಲಿ ನೀರಿನ ಚಿಮ್ಮುವಿಕೆಯು ಹೊರಗೆ ಬರುವುದಿಲ್ಲ; ಅದಕ್ಕೆ ವಿರುದ್ಧವಾಗಿ, ಅದು ಬೆಂಕಿಯನ್ನು ಹರಡಿಸುತ್ತದೆ. 8ನೆಯ ಅಧ್ಯಾಯದಲ್ಲಿ, ಸೌಲನು ಸಭೆಯನ್ನು ಹಿಂಸಿಸುವಾಗ, ಕ್ರೈಸ್ತತ್ವದ ಬೆಂಕಿಯು ಹರಡಲು ಆರಂಭಿಸಿತು!

## ಬೆಂಕಿಯು ಹರಡಿತು (8:1-4)

ಅಧ್ಯಾಯ 8 ಈ ವಾಕ್ಯಗಳಿಂದ ಆರಂಭವಾಗುತ್ತದೆ: "ಸೌಲನು ಅವನ (ಸ್ತೇಫನನ) ಕೊಲೆಗೆ ಸಮ್ಮತಿಸುವವನಾಗಿದ್ದನು" (8:1ಎ). ಸೌಲನು ತಾನು ಏನುಮಾಡಿದರೂ ಅದಕ್ಕೆ ನ್ಯಾಯಮಂಡಳಿಯ ಬೆಂಬಲವು ಅವನಿಗೆ ಇತ್ತು ಎಂದು ನಾವು ಒಂದೆಡೆ ಓದುತ್ತೇವೆ (9:1, 2; 22:4, 5; 26:10); ಆತನು ಸಭಾಮಂದಿರದ (ಸನ್ಹೆದ್ರಿನ್) "ಬಾಡಿಗೆಯ ಕೊಲೆಗಾರ" (ಹಿಂಸಿಸುವ) ಮನುಷ್ಯನಾಗಿದ್ದನು.[5] ಆತನು ಖಚಿತವಾಗಿ ಅನೇಕ ಸಹಾಯಕರನ್ನು ಹೊಂದಿದ್ದನು. (ಬಹುಶ ಅವರು "ಬಾಡಿಗೆಯ ಕೊಲೆಗಾರರು");[6] ಅವನು ತನ್ನಷ್ಟಕ್ಕೆ ತಾನೇ ಹಾನಿಯನ್ನು ಮಾಡಲಿಕ್ಕೆ ಆಗುತ್ತಿರಲಿಲ್ಲ. ಹೇಗೋ, ಹಿಂಸೆಯ ಹಿಂದೆ ಇರುವ ಚಲನೆಯ ಶಕ್ತಿಯು ಎಂದರೆ "ಯೌವನಸ್ಥನಾದ" ಸೌಲನು, ಸ್ತೇಫನನಿಗೆ ಕಲ್ಲನ್ನು ಹೊಡೆಯುವ ಮೊದಲು ಅವರು ತಮ್ಮ ಬಟ್ಟೆಗಳನ್ನು ಸಾಕ್ಷಿರೂಪದಲ್ಲಿ ಆತನ ಕಾಲುಗಳ ಬಳಿಯಲ್ಲಿ ಇಟ್ಟರು (7:58).

ವಚನ 1 ಮುಂದುವರೆಯುತ್ತಾ: "ಮತ್ತು ಆ ದಿವಸದಲ್ಲಿ [ಸ್ತೇಫನನು ಸತ್ತದಿನದಲ್ಲಿ] ಯೆರೂಸಲೇಮಿನಲ್ಲಿದ್ದ ಸಭೆಗೆ ದೊಡ್ಡ ಹಿಂಸೆ ಉಂಟಾಯಿತು; ಅಪೊಸ್ತಲರ ಹೊರತಾಗಿ ಎಲ್ಲರೂ ಯೂದಾಯ ಸಮಾರ್ಯ ಸೀಮೆಗಳಲ್ಲಿ ಚದುರಿ ಹೋದರು" (8:1ಬಿ). ಸ್ತೇಫನನನ್ನು ಕೊಲ್ಲುವವರೆಗೆ ನಿರಂತರವಾದ ಪ್ರತಿಕ್ರಿಯೆಯು ನ್ಯಾಯಮಂಡಳಿಯ ಭಾಗವಾಗಿತ್ತು, ಈ ಹಿಂಸೆಯು ಶ್ರೀಮಂತರು ಮತ್ತು ಅಧಿಕಾರಯುಕ್ತರ ರಹಸ್ಯ ಕೊಠಡಿಯಲ್ಲಿ ಕೇಡುಕನ್ನು ಯೋಜಿಸಿದ್ದು ಆಗಿರಲಿಲ್ಲ ಎಂದು ನಾನು ತಿಳಿದುಕೊಳ್ಳುತ್ತೇನೆ, ಆದರೆ ಸ್ತೇಫನನ ಕೊಲೆಯು ಸ್ವಾಭಾವಿಕವಾಗಿ ನಡೆದ ಘಟನೆ ಆಗಿದೆ. ಶಾರ್ಕ ಮೀನಿನ ಬಗ್ಗೆ ಅಧ್ಯಾಯನ ಮಾಡುವ ಒಂದು ತಂಡದ ಅಧ್ಯಯವು ರಕ್ತವು ನೀರಿನುದ್ದಕ್ಕೂ ಹರಿಯುವಂತೆ ದ್ರವ್ಯವು ಹರಿಯುತ್ತದೆ; ಆಗ ಶಾರ್ಕ ಹುಚ್ಚಾಟದೊಂದಿಗೆ ಕೊಲ್ಲುವುದಕ್ಕೆ ತೊಡಗುತ್ತದೆ ಎಂದು ತಿಳಿಸುತ್ತದೆ. ಹೀಗಿಯೇ

ಸ್ತೇಫನನ ರಕ್ತದ ದೃಷ್ಯವು ಯೇಸುವಿನ ವೈರಿಗಳನ್ನು ಹುಚ್ಚುತನದಿಂದ ಮತ್ತು *ಎಲ್ಲ* ಕ್ರೈಸ್ತರನ್ನೂ ನಾಶಮಾಡುವ ದುರೀಚ್ಛೆಯ ಆತ್ಮವನ್ನು ತುಂಬಿದ ವೈರಿಗಳಿಂದಲೂ ತುಂಬಿಕೊಂಡಿತು.

"ಆ ದಿವಸದಲ್ಲಿ ... ಸಭೆಗೆ ದೊಡ್ಡ ಹಿಂಸೆ ಉಂಟಾಯಿತು" ಈ ಪದಗುಚ್ಛವು ಅಧ್ಯಾಯ 8ರ ಮೊದಲ ನಾಲ್ಕು ವಚನಗಳಲ್ಲಿ ಎಲ್ಲ ಘಟನೆಗಳು ಸ್ತೇಫನನು ಸತ್ತ ದಿನವೇ ಸಂಭವಿಸಿದವು ಎಂದರ್ಥವಲ್ಲ. ಬದಲಾಗಿ, ಹಿಂಸೆಯು ಆ ದಿನದಿಂದ ಆರಂಭವಾಯಿತು - ಮತ್ತು ಅನೇಕ ದಿನಗಳವರೆಗೆ ಮುಂದುವರೆಯಿತು.

"ಹಿಂಸೆಯು ಉದ್ಭವಿಸಿದಾಗ ಅಪೊಸ್ತಲರ ಹೊರತಾಗಿ ಎಲ್ಲರೂ *ಯೂದಾಯ ಸಮಾರ್ಯ ಸೀಮೆಗಳಲ್ಲಿ* ಚದುರಿ ಹೋದರು" (8:1ಸಿ; ಒತ್ತಿ ಹೇಳಿದ್ದು ನನ್ನದು).[7] ಈ ಪರಿಚ್ಛೇದವು 1:8ನ್ನು ಸೂಚಿಸುತ್ತದೆ "ಯೆರೂಸಲೇಮು, ಮತ್ತು ಯೂದಾಯ ಮತ್ತು ಸಮಾರ್ಯ ಎಲ್ಲಡೆಯಲ್ಲಿಯೂ ನೀವು ನನ್ನ ಸಾಕ್ಷಿಗಳಾಗಿರಬೇಕು" ಎಂದು ಯೇಸು ಹೇಳಿದ್ದನು. ನಾವು ಯೇಸುವಿನ ಎರಡನೆಯ ಯೋಜನೆಯ ಹಂತವನ್ನು ತಲುಪಿದ್ದೇವೆ.

"*ಅಪೊಸ್ತಲರ ಹೊರತಾಗಿ* ಎಲ್ಲರೂ ... ಚದುರಿಹೋದರು" ಎಂಬುದನ್ನು ಗಮನಿಸಿರಿ (8:1ಸಿ; ಒತ್ತಿ ಹೇಳಿದ್ದು ನನ್ನದು). ಉಳಿದ ಕ್ರೈಸ್ತರು ಚದುರಿದ ಹಾಗೆ ಅಪೊಸ್ತಲರು ಯಾಕೆ ಚದರಿ ಹೋಗಲಿಲ್ಲ ಎಂಬುದನ್ನು ನಾವರಿಯೆವು. ಬಹುಶಃ ಸೌಲನು ಮತ್ತು ಆತನ ಅನುಚರರು ಅವರನ್ನು ಅವರಷ್ಟಕ್ಕೆ ಬಿಟ್ಟಿರಬೇಕು, ಯಾಕೆಂದರೆ ಅವರಲ್ಲಿರುವ ಶಕ್ತಿಗೆ ಭಯಪಟ್ಟು ಮತ್ತು ಅವರಿಗೆ ಒಂದು ವೇಳೆ ಅವರು ಯಾವ ಅನುಯಾಯಿಗಳು ಇಲ್ಲದೆ ಹೋದರೆ ಅವರು ನಿರ್ಬಲರಾಗುವರು ಎಂಬ ಊಹೆಯಿಂದ. ಸೌಲನು ಪರಿಗಣಿಸದೇ ಇದ್ದ ಎಲ್ಲ ಕ್ರೈಸ್ತರಿಗೆ ಸೇವೆ ಮಾಡುವುದಕ್ಕೋಸ್ಕರ[8] ಮತ್ತು ಸೆರೆಯಾಗಿಸಲ್ಪಟ್ಟ ಜನರಿಗೂ ಸೇವೆಮಾಡುವುದಕ್ಕೆ ಎಂಥ ತೊಂದರೆಯದಾಯಕ ಪರಿಸ್ಥಿತಿಯಲ್ಲಿಯೂ ಅಪೊಸ್ತಲರು ಯೆರೂಸಲೇಮನ್ನು ತಮ್ಮ ಸ್ಥಳವನ್ನಾಗಿ ಆರಿಸಿಕೊಂಡರು. ಬಹುಶಃ ಅಲ್ಲಿ ಇನ್ನೂ ಕೆಲ ಕಾರಣಗಳಿರಬಹುದು.[9] ಲೂಕನ ಉದ್ದೇಶವು ಹಿಂಸೆಯು ಅಪೊಸ್ತಲರ ಮೇಲೆ ಪರಿಣಾಮ ಮಾಡಿತು ಎಂದು ಹೇಳುವುದಲ್ಲ, ಆದರೆ ಸಭೆಯ ಸಾಮಾನ್ಯ ಸದಸ್ಯರಿಗೆ ಹಿಂಸೆಯು ಯಾವ ರೀತಿಯಲ್ಲಿ ಪರಿಣಾಮ ಮಾಡಿತು ಎಂಬುದನ್ನು ತಿಳಿಸುವುದೇ ಆಗಿತ್ತು. ಇದೇ ಮೊದಲ ಸಾರಿ ಸಂಪೂರ್ಣ ಸಭೆಯು ದೌರ್ಜನ್ಯಕ್ಕೆ ಗುರಿಯಾಯಿತು. ಅಪೊಸ್ತಲರು ಒತ್ತಡದೆಡೆಯಲ್ಲೂ ಎದ್ದು ನಿಲ್ಲಲ್ಲು ಸಮರ್ಥರಾದರು (ಅಧ್ಯಾಯ 4 ಮತ್ತು 5). ಸಭೆಯ ಉಳಿದ ಸದಸ್ಯರ ಬಗೆಗೆ ಏನು? ಅವರು ಹೇಗೆ ಬದುಕಿದರು?

ನಾವು ದೂರ ಹೋಗಬೇಕಾಗಿಲ್ಲ, ಇದಕ್ಕಾಗಿ ವಚನ 2 ಹೇಳುತ್ತದೆ "ಭಕ್ತರಾದ ಜನರು ಸ್ತೇಫನನನ್ನು ಹೂಣಿಟ್ಟು ಅವನಿಗೋಸ್ಕರ ಬಹಳವಾಗಿ ಗೋಳಾಡಿದರು" (ವಚನ 2). ಸ್ತೇಫನನ ಮುರಿದ ರಕ್ತಸಿಕ್ತವಾದ ದೇಹವು ಭೂಮಿಯಲ್ಲಿ ಬಿದ್ದಾಗ, ಕೋಪೋದ್ರಿಕ್ತವಾದ ಗುಂಪು ಚದುರಿತು, ಅವರ ರಕ್ತಮಾಂಸವು ನಿಮಿಷಮಾತ್ರದ ಸಂತೃಪ್ತತೆಯನ್ನು ಹೊಂದಿತ್ತು. ಕ್ರೈಸ್ತರು[10] ತಾವು ತೆಗೆದುಕೊಳ್ಳುವ ಕಾರ್ಯದ ಬಗ್ಗೆ ಎಚ್ಚರಿಕೆಯುಳ್ಳವರಾದರು, ಆ ಸ್ಥಳಕ್ಕೆ ಬಂದರು ಮತ್ತು ಆತನ ಮುರಿದ ದೇಹವನ್ನು ಮಮತೆಯಿಂದ ತೆಗೆದುಕೊಂಡರು, ನಂತರ ಮನೆಗೆ ಕೊಂಡೊಯ್ದು ಅದನ್ನು ಹೂಣಲು ಸಿದ್ಧಪಡಿಸಿದರು. ಯೆಹೂದಿ ನ್ಯಾಯ ಶಾಸನವು ಕೇವಲ ಗಲ್ಲಿಗೇರಿಸಿದ ಕೊಲೆಪಾತಕಿಗಳನ್ನು ಹೂಣಲು ಅವಕಾಶಕೊಡುತ್ತಿತ್ತು, ಆದರೆ ಅವರಿಗಾಗಿ ಗೋಳಾಡಲು[11] ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವಂತಿರಲಿಲ್ಲ.[12] ಅಪಾಯವಿದ್ದಾಗಲೂ, ಈ ಧೈರ್ಯವಂತ ಜನರು ಅವರ ದುಖವನ್ನು ಮುಚ್ಚಿಡುವ ಪ್ರಯತ್ನವನ್ನು ಮಾಡಲಿಲ್ಲ; ಅವರು ಜೋರಾಗಿ ಅತ್ತರು!

ಯಾವಾಗ ಇವರೆಲ್ಲರೂ ದುಖತಪ್ತರಾದರೋ, ಆಗ ಸೌಲನು ಮತಿಭ್ರಾಂತನಾದನು: "ಆದರೆ ಸೌಲನು ಮನೆಮನೆಗಳಲ್ಲಿ ಹೊಕ್ಕು ಗಂಡಸರನ್ನೂ ಹೆಂಗಸರನ್ನೂ[13] ಎಳೆದುಕೊಂಡು ಬಂದು ಸೆರೆಮನೆಗೆ ಹಾಕಿಸಿ ಸಭೆಯನ್ನು ಹಾಳುಮಾಡುತ್ತಿದ್ದನು" (ವಚನ 3).

“ಹಾಳುಮಾಡು” ಇದು ಭಾಷಾಂತರವಾದ ಗ್ರೀಕಪದವಾಗಿದ್ದು ಪ್ರಾಣಿಗಳನ್ನು ಕ್ರೂರವಾದ ರೀತಿಯಲ್ಲಿ ನೋಡಿಕೊಳ್ಳುವ ರೀತಿ ಮತ್ತು ನಿರಾತಂಕವಾಗಿ ಅದರ ದೇಹವನ್ನು ಅವರ ಬೇಟೆಯಾಗಿಸಿಕೊಳ್ಳುವುದನ್ನು ಸೂಚಿಸಲು ಬಳಸುವಂತದ್ದಾಗಿತ್ತು. ಸೌಲನು ಸಭೆಯನ್ನು ನಾಶಮಾಡುವ ಒಂದೇ ಉದ್ದೇಶಕ್ಕಾಗಿ ಕ್ರೂರಪ್ರಾಣಿಯಾಗಿ ಬದಲಾದನು. ಆತನು ಗಂಡಸರನ್ನು ಅಥವಾ ಹೆಂಗಸರನ್ನು ಯಾರೊಬ್ಬರನ್ನೂ ಉಳಿಸಲಿಲ್ಲ. ಬಹುಶಃ ಆತನೂ ಅತನ ಸಹವರ್ತಿಗಳು ಕ್ರೈಸ್ತರ ಮನೆಯೊಳಗೆ ನುಗ್ಗುತ್ತಿದ್ದರು, ತಂದೆ ಮತ್ತು ತಾಯಿಗಳ ಕೈಗಳನ್ನು ಬೆನ್ನ ಹಿಂದೆ ಕಟ್ಟುತ್ತಿದ್ದರು, ಮತ್ತು ಅವರನ್ನು ಸೆರೆಮನೆಗೆ ಎಳೆದೂಯ್ಯುತ್ತಿದ್ದರು, ಅವರ ಅಳುತ್ತಿದ್ದ ಮಕ್ಕಳನ್ನು ಹಿಂದಕ್ಕೆ ಬಿಡುತ್ತಿದ್ದರು. ಸೆರೆಮನೆಯಲ್ಲಿ, ತಮ್ಮ ನಂಬಿಕೆಯನ್ನು ನಿರಾಕರಿಸುವಂತೆ ಪ್ರಯತ್ನಿಸುತ್ತಾ, ಅವರನ್ನು ಆತನು ಹೊಡೆಯುತ್ತಿದ್ದನು ಮತ್ತು ಅವರಿಗೆ ಹಿಂಸೆಯನ್ನು ಕೊಡುತ್ತಿದ್ದನು. ಕೆಲವರು ಮರಣಕ್ಕೆ ಒಪ್ಪಿಸಲ್ಪಟ್ಟರು. ಆತನು ನಂತರದಲ್ಲಿ ತನ್ನ ಧರ್ಮಾಂಧತೆಯ ಬಗೆಗೆ ಹೇಳಿದ್ದಾನೆ:

> ಕ್ರಿಸ್ತ ಮಾರ್ಗದವರನ್ನು ಹಿಂಸಿಸುವವನಾಗಿ ಗಂಡಸರಿಗೂ ಹೆಂಗಸರಿಗೂ ಬೇಡೀ ಹಾಕಿಸುತ್ತಾ ಅವರನ್ನು ಸೆರೆಮನೆಗೆ ಕಳಿಸುತ್ತಾ ಇದ್ದೆನು ... ಎಲ್ಲಾ ಸಭಾಮಂದಿರಗಳಲ್ಲಿ ನಿನ್ನ ಮೇಲೆ ನಂಬಿಕೆಯಿಟ್ಟವರನ್ನು ನಾನು ಸೆರೆಮನೆಯಲ್ಲಿ ಹಾಕಿಸುತ್ತಾ ಹೊಡಿಸುತ್ತಾ ಇದ್ದೆನೆಂಬುದನ್ನು ಅವರೇ ತಿಳಿದಿದ್ದಾರೆ ... ಮಹಾಯಾಜಕರಿಂದ ಅಧಿಕಾರವನ್ನು ಪಡೆದು ದೇವಜನರಲ್ಲಿ ಅನೇಕರನ್ನು ಸೆರೆಮನೆಗಳಲ್ಲಿ ಇರಿಸಿದಾಗ ... ಮರಣದ ತೀರ್ಪಾದಾಗ ನನ್ನ ಸಮ್ಮತಿಯನ್ನು ಸೂಚಿಸಿದನು. ಎಲ್ಲಾ ಸಭಾಮಂದಿರಗಳಲ್ಲಿಯೂ ನಾನು ಅನೇ ಕಾವರ್ತಿ ಅವರನ್ನು ದಂಡಿಸಿ ಅವರಿಂದ ದೂಷಣೆಯ[13] ಮಾತುಗಳನ್ನಾಡಿಸುವುದಕ್ಕೆ ಪ್ರಯತ್ನಿಸಿದೆನು (22:4, 19; 26:10, 11).

ಅಧ್ಯಾಯ 8ರ ವಚನ 4 ಯಾರು ಚದುರಿಸಲ್ಪಟ್ಟರು ಎಂಬುದನ್ನು ನಮಗೆ ಜ್ಞಾಪಿಸಿಕೊಡುತ್ತದೆ. ಅವುಗಳನ್ನು ನಿಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ. ಅವರು ತಾವು ಹೊಂದಿದ ಮನೆಗಳನ್ನು, ಮಂದೆಗಳನ್ನು ಮತ್ತು ಪಶುಗಳನ್ನೂ, ಆಸ್ತಿಯನ್ನೂ ಕೇವಲ ತಮ್ಮ ಚಿಕ್ಕ ಕೈಚೀಲದಲ್ಲಿ ಹೊತ್ತಂತಹದನ್ನು ಬಿಟ್ಟರೆ ಎಲ್ಲವನ್ನೂ ಕಳೆದುಕೊಂಡರು. ಪಾಲಿಸ್ತೇನಿನ ಧೂಳಿನ ರಸ್ತೆಯಲ್ಲಿ ಬೇಸತ್ತು ಕುಳಿತ ಅವರನ್ನು ನೀವು ನೋಡಬಹುದು, ಆ ರಸ್ತೆಯ ಮೇಲೆ ಸಾಗುತ್ತಿರುವ ಇತರರಿಗೆ, ಅವರು ಕುತೂಹಲದ ವಸ್ತುವಾಗಿದ್ದಾರೆ. ಜನರು ಹೀಗೆ ಕೇಳಿರಬಹುದು, “ಏನು ಸಂಭವಿಸಿತು?” ಈ ಕ್ರೈಸ್ತರು ಬಹುಶಃ ಏನೆಂದು ಉತ್ತರಿಸಿರಬಹುದು “ನಾವು ಎಲ್ಲವನ್ನೂ ಕಳೆದುಕೊಂಡಿದ್ದೇವೆ ಅ ಯೇಸುಕ್ರಿಸ್ತನ ಹಿಂಬಾಲಕರಾಗಿರುವದು ಎಷ್ಟು ಕಷ್ಟದಾಯಕವಾದದ್ದು ಎಂದು ನಾವು ಕಂಡುಕೊಂಡೆವು?” “ಮುಂದೆ ನಾನು ಇನ್ನು ಎಷ್ಟರಮಟ್ಟಿಗೆ ಮುಂದುವರೆಯಬಹುದೋ ಎಂಬುದನ್ನು ನಾವರಿಯೆವು?” ನಾಲ್ಕನೆಯ ವಚನವನ್ನು ಕೇಳಿರಿ “ಚದುರಿಹೋದವರು ಅಲ್ಲಲ್ಲಿ ಹೋಗಿ ಸುವಾರ್ತಾವಾಕ್ಯವನ್ನು ಸಾರುತ್ತಿದ್ದರು”! “ಬೋಧಿಸು” ಎಂಬ ಗ್ರೀಕಪದದ ಭಾಷಾಂತರವು ಸಾಮಾನ್ಯ ಪದವಾದ “ಬೋಧಿಸು” ಎಂಬುದಲ್ಲ. ಆದರೆ “ಸುವಾರ್ತೆ ಸಾರುವದು” ಎಂಬುದಕ್ಕೆ ಹತ್ತಿರವಾಗಿದೆ. ಈ ಹಿಂಸೆಗೊಳಗಾದ ಕ್ರೈಸ್ತರು “ನೋಡಿರಿ ಲೋಕದಲ್ಲಿ ಏನೆಲ್ಲ ಸಂಭವಿಸುತ್ತಿದೆ” ಎಂದು ಹೇಳಲಿಲ್ಲ ಬದಲಾಗಿ “ನೋಡಿರಿ ಲೋಕಕ್ಕೆ ಯಾರು ಬಂದರು” ಎಂದು ಹೇಳುವವರಾಗಿದ್ದಾರೆ.

ಈ ಕ್ರೈಸ್ತರು ಸ್ತೇಫನನ ಉದಾಹರಣೆಯೊಂದಿಗೆ ಕಲಿತರು: ಅವರ ವೈರಿಗಳು ಅವರ ದೇಹವನ್ನು ಹಿಂಡಬಹುದಿತ್ತು ಆದರೆ ಅವರ ಆತ್ಮವನ್ನಲ್ಲ; ಅವರು ಜೀವವನ್ನೇ ಅಂತ್ಯಗೊಳಿಸಬಹುದಿತ್ತು ಆದರೆ ಅವರ ಪ್ರಭಾವವನ್ನಲ್ಲ; ಅವರು ವಾಸಿಸುವ ಮನೆಯನ್ನು (ಭೌತಿಕ) ತೆಗೆದುಕೊಳ್ಳಬಹುದಿತ್ತು ಆದರೆ ಅವರಲ್ಲಿರುವ ಆಂತರ್ಯದ ಮನೆಯನ್ನಲ್ಲ (ಮಾನಸಿಕ) (ಯೋಹಾನ 14:1-3); ಅವರು ಅವರ ಆಸ್ತಿಯನ್ನು ಕಸಿದುಕೊಳ್ಳಬಹುದಿತ್ತು,

ಆದರೆ ಅವರಲ್ಲಿನ ಸಂಪತ್ತನ್ನಲ್ಲ (ಮತ್ತಾಯ 6:20).[14]

## ಉತ್ತರದಿಕ್ಕಿಗೆ ಹರಡಿದ ಜ್ವಾಲೆ (8:5-25)

1 ಮತ್ತು 4 ವಚನಗಳ ಮುಖ್ಯಾಂಶವು ಅಧ್ಯಾಯ 11ರ ನಂತರದಲ್ಲಿ ವಿಸ್ತೃತಗೊಳುತ್ತದೆ: "ಸ್ತೆಫನನ ವಿಷಯದಲ್ಲಿ ಉಂಟಾದ ಹಿಂಸೆಯಿಂದ ಚದುರಿಹೋದವರು ಯೆಹೂದ್ಯರಿಗೇ ಹೊರತು ಮತ್ತಾರಿಗೂ ದೇವರ ವಾಕ್ಯವನ್ನು ಹೇಳದೆ ಫೊಯನಿಕ ಕುಪ್ರ ಅಂತಿಯೋಕ್ಯ ಪ್ರಾಂತ್ಯಗಳವರೆಗೂ ಸಂಚರಿಸಿದರು" (11:19). ಲೂಕನು ಯೆರೂಸಲೇಮಿನಿಂದ ಹೊರಗೆ ಸುವಾರ್ತೆಯನ್ನು ಹಂಚಿಕೊಳ್ಳದ ಪ್ರತಿಯೊಬ್ಬ ನಿರ್ದಿಷ್ಟ ಕ್ರೈಸ್ತರ ಮೇಲೆ ಒಂದು ಕ್ಷಣ, ಗಮನಹರಿಸಲು ಬಯಸಿದನು. "ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಲು ಪ್ರಾರಂಭಿಸಿದನು" (8:5).

ವಚನ 5ರಿಂದ 25ವರೆಗಿನ ವಚನಗಳು ಸಮಾರ್ಯದವರ ಪರಿವರ್ತನೆಯ ಬಗೆಗೆ ಹೇಳುತ್ತದೆ. ಇದು ಈ ಪುಸ್ತಕದಲ್ಲಿ ದಾಖಲಾದ ಪರಿವರ್ತನೆಯ ಎರಡನೆಯ ವಿವರಣೆಯಾಗಿದೆ. ಅಧ್ಯಾಯ 2ರಲ್ಲಿ, ಪಂಚಾಶತ್ತಮ ದಿನದಂದು ಯೆಹೂದಿಗಳ ಪರಿವರ್ತನೆಯ ವಿವರಗಳನ್ನು ನಾವು ಹೊಂದಿದ್ದೇವೆ. ಆ ಸಮಯದಂದಿನಿಂದ, ಯೆಹೂದ್ಯರನ್ನು ಹೊರತಾಗಿ ಮತ್ತಿನ್ಯಾರೂ ಪರಿವರ್ತನೆಯಾಗಿರಲಿಲ್ಲ, ಹೀಗೆ ಸಂಖ್ಯೆಯನ್ನು ವೃದ್ಧಿಸುವ ಬದಲು, ನಾವು ವಿಸ್ತೃತವಾದ ಸಾರಾಂಶದ ಹೇಳಿಕೆಯನ್ನು ಹೊಂದಿದ್ದೇವೆ.

> … ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು (2:47).
>
> ಮತ್ತು ಇನ್ನು ಎಷ್ಟೋ ಮಂದಿ ಗಂಡಸರೂ ಹೆಂಗಸರೂ ಕರ್ತನಲ್ಲಿ ನಂಬಿಕೆ ಇಡುವವರಾಗಿ ಅವರ ಮಂಡಲಿಯಲ್ಲಿ ಸೇರಿಕೊಳ್ಳುತ್ತಿದ್ದರು (5:14).
>
> … ಮತ್ತು ದೇವರ ವಾಕ್ಯವು ಪ್ರಭಲವಾಯಿತು. ಶಿಷ್ಯರ ಸಂಖ್ಯೆಯು ಯೆರೂಸಲೇಮಿನಲ್ಲಿ ಬಹಳವಾಗಿ ಹೆಚ್ಚುತ್ತಾಬಂತು. ಯಾಜಕರಲ್ಲಿಯೂ ಬಹುಜನರು ಕ್ರಿಸ್ತನಂಬಿಕೆ ಒಳಗಾಗುತ್ತಾ ಇದ್ದರು (6:7).

ಈಗ, ಹೇಗೋ, ಸುವಾರ್ತೆಯು ಯೆಹೂದಿಗಳ ಭಾಗವಾಗಿ, ಅನ್ಯರ, ಸಮಾರ್ಯದವರ ಭಾಗವಾಗಿ ಹೋಗುತ್ತಿದ್ದಂತೆ, ನಾವು ದೈತ್ಯಾಕಾರದ ಹೆಜ್ಜೆಯನ್ನು ತೆಗೆದುಕೊಳ್ಳುವಾ. ಇದನ್ನು "ಸೇತುವೆಯ" ಪರಿವರ್ತನೆ ಎಂದು ಕರೆಯಲ್ಪಡುವುದನ್ನು ನಾವು ಹೊಂದಿದ್ದೇವೆ. ಪ್ರತಿ ಸಾರಿ ನಾವು ಅಪೊಸ್ತಲರ ಕೃತ್ಯದಲ್ಲಿ ವಿವರವಾದ ಪರಿವರ್ತನೆಯ ವಿವರಗಳನ್ನು ನೋಡುತ್ತೇವೆ, ಇದು "ಸೇತುವೆ" ಪರಿರ್ತನೆಯಾಗಿದೆ, ಈ ಪರಿವರ್ತನೆಯು ಸುವಾರ್ತೆಯನ್ನು ಹಂಚುವಲ್ಲಿ ಹೊಸ ಸಾಧ್ಯತೆಗಳತ್ತ ನಡೆಸುವುದಾಗಿದೆ.

ಈ ಹೆಜ್ಜೆಯ ಮಹತ್ವವನ್ನು ಪ್ರಶಂಸಿಸುತ್ತಾ, ಸಮಾರ್ಯದವರ ಬಗೆಗೆ ಮತ್ತು ಯೆಹೂದಿಗಳೊಂದಿಗಿನ[15] ಅವರ ಸಂಬಂಧದ ಬಗೆಗೆ ಅಲ್ಪವಾಗಿ ತಿಳಿದುಕೊಳ್ಳಲೇಬೇಕು. ಯೇಸುವಿನ ಮತ್ತು ಅಪೊಸ್ತಲರ ಸಮಯದಲ್ಲಿ, ಸಮಾರ್ಯದವರು ಯೆರೂಸಲೇಮಿನ ಹೃದಯಭಾಗದಲ್ಲಿ, ಗಲಿಲಾಯ ಮತ್ತು ಯೂದಾಯಗಳ[16] ಮಧ್ಯದಲ್ಲಿದ್ದ ಪ್ರಾಂತ್ಯವಾದ ಸಮಾರ್ಯ ಪ್ರಾಂತ್ಯದಲ್ಲಿ ನೆಲಸಿದ್ದರು. ಸಮಾರ್ಯದ ಜನಾಂಗವು ಯೆಹೂದಿಗಳ ದಾಸತ್ವದ ಪರಿಣಾಮವೇ ಆಗಿದೆ. ಸಾವಿರಾರು ಯೆಹೂದಿಗಳು ದಾಸತ್ವಕ್ಕೆ ಒಯ್ಯಲ್ಪಟ್ಟರು, ಆದರೆ ಕೆಲವರು ಪಾಲಿಸ್ತೇನಿನಲ್ಲಿ ಉಳಿದರು. ಇತರ ದೇಶದ ವಸಾಹತುದಾರರು ಪಾಲಿಸ್ತೇನಕ್ಕೆ ಕಳುಹಿಸಲ್ಪಟ್ಟರು, ಈ ಅನ್ಯಜನರು ಯೆಹೂದಿಗಳೊಂದಿಗೆ ಮದುವೆಯಾದರು. ಇದರ ಪರಿಣಾಮವಾಗಿ ಬಂದ ಜನಾಂಗವೇ ಸಮಾರ್ಯ - ಯೆಹೂದಿಗಳ ಭಾಗ, ಅನ್ಯಜನಾಂಗದ

ಭಾಗ, ದೇವರಾಧಕರ ಭಾಗ, ಮೂರ್ತಿಪೂಜಕರ ಭಾಗ ಎಂಬುದಾಗಿ ವಿಭಾಗಿಸಲ್ಪಟ್ಟಿವೆ.[17] ಯೆಹೂದಿಗಳು ದಾಸ್ಯತ್ವಕ್ಕೆ ತೆಗೆದುಕೊಡು ಹೋಗುವುದರಿಂದ ಪಾಲಿಸ್ತೇನಕ್ಕೆ ಮರಳಿದಾಗ, ಅವರು ತಮ್ಮ ಸ್ವಜನಾಂಗಕ್ಕೆ ಹಿಂದಿರುಗಿದ್ದಕ್ಕಾಗಿ ಮತ್ತು ಧಾರ್ಮಿಕ ಪರಿಶುದ್ಧತೆಗಾಗಿ ಹೆಮ್ಮೆಪಡುತ್ತಿದ್ದರು. ಪುನರ್ನಿರ್ಮಾಣಕ್ಕಾಗಿ ಸಮಾರ್ಯದವರ ಸಹಾಯವನ್ನು ಅವರು ನಿರಾಕರಿಸಿದರು. ಇದರ ಪರಿಣಾಮವು ಅವರ ಮಧ್ಯದಲ್ಲಿನ ಬಿರುಕು ಯೇಸುವಿನ ಮತ್ತು ಅಪೊಸ್ತಲರ ಸಮಯದಲ್ಲಿಯೂ ಇತ್ತು. ಯೆಹೂದಿಗಳು ಮತ್ತು ಸಮಾರ್ಯದವರು ಒಬ್ಬರನ್ನೊಬ್ಬರು ದ್ವೇಷಿ ಸುತ್ತಿದ್ದರು. ಯೇಸು ಮತ್ತು ಸಮಾರ್ಯದ ಸ್ತ್ರೀಯ ಕಥೆಯಲ್ಲಿ ಇದು "ಯೆಹೂದಿಗಳಿಗೂ ಸಮಾರ್ಯದವರಿಗೂ ಯಾವ ಹೊಕ್ಕುಬಳಿಕೆ ಇರಲಿಲ್ಲ" (ಯೋಹಾನ 4:9) ಎಂಬುದನ್ನು ಓದುತ್ತೇವೆ ಮತ್ತು ವಿರೋಧವು ಸಹ ನಿಜವಾಗಿತ್ತು. ಪ್ರಮುಖವಾದ ಮಾನಸಿಕ ಮತ್ತು ಭಾವನಾತ್ಮಕವಾದ ಅಡೆತಡೆಗಳು ಸುವಾರ್ತೆಯನ್ನು ಸಮಾರ್ಯದವರೊಂದಿಗೆ ಹಂಚಿಕೊಳ್ಳುವುದರ ಮೂಲಕ ಅದನ್ನು ಹತ್ತಿಕ್ಕಿರಬಹುದು.

ಸುವಾರ್ತೆಯನ್ನು ಸಮಾರ್ಯದವರಿಗೆ ತೆಗೆದುಕೊಂಡು ಹೋಗಲು ದೇವರು ಬಳಸಿದ ಮನುಷ್ಯನು ಫಿಲಿಪ್ಪನು ಆಗಿದ್ದನು. ಈತನು ಅಪೊಸ್ತಲನಾದ ಫಿಲಿಪ್ಪನಲ್ಲ (1:13), ಆದರೆ ಈ ಫಿಲಿಪ್ಪನನ್ನು ಅಧ್ಯಾಯ 6ರಲ್ಲಿ ಊಟೋಪಚಾರಕ್ಕಾಗಿ ಆರಿಸಲ್ಪಟ್ಟ ಏಳು ಜನರಲ್ಲಿ ಒಬ್ಬನಾದ ಈತನನ್ನು ನಾವು ನೋಡಿದ್ದೇವೆ. ಈತನಲ್ಲಿ ಅಪೊಸ್ತಲರಿಂದ ಹೇಳಲಾದ ಅರ್ಹತೆಗಳಾದ, ನಾವು ತಿಳಿದಂತೆ, "ಒಳ್ಳೆಯ ಹೆಸರುಳ್ಳವನೂ" ಮತ್ತು "ಪರಿಶುದ್ಧತ್ಮಾನಿಂದ ತುಂಬಿದವನೂ"[18] ಮತ್ತು "ಜ್ಞಾನಸಂಪನ್ನನೂ" ಎಂಬವುಗಳನ್ನು ಹೊಂದಿದ್ದನು (ವಚನ 6:3). ಈತನೂ ಸಹ ಗ್ರೀಕಭಾಷೆಯ ಯೆಹೂದಿಯಾಗಿದ್ದು ಪಾಲಿಸ್ತೇನಿನಿಂದ ಹೊರಗೆ ಜನಿಸಿದವನು ಬೆಳದವನೂ ಆಗಿದ್ದನು - ಮತ್ತು ಹೀಗೆ ಸಮಾರ್ಯದವರ ಬಗೆಗೆ ಪೂರ್ವಾಗ್ರಹಪೀಡಿತ ಭಾವವನೆಯನ್ನು ಹೊಂದಿದ್ದರೂ ಪಾಲಿಸ್ತೇನಿನ ಯೆಹೂದಿಗಳಷ್ಟು ಬಲವಾದ ಪ್ರತಿರೋಧ ಭಾವನೆಗಳನ್ನು ಹೊಂದಿರಲಿಲ್ಲ.

"ಮತ್ತು ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ[19] ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು" (8:5). ಫಿಲಿಪ್ಪನು ಆ ಪಟ್ಟಣವನ್ನು ಪ್ರವೇಶಿಸಿದನು ಎಂಬುದು ನಮಗೆ ಖಚಿತವಾಗಿಲ್ಲ. "ಸಮಾರ್ಯವೆಂಬ ಪಟ್ಟಣ" ಇದರ ಅರ್ಥವು "ಸಮಾರ್ಯವೆಂದು ಕರೆಯಲ್ಪಟ್ಟ ಪಟ್ಟಣ" ಅಥವಾ "ಸಮಾರ್ಯದ ಪ್ರಧಾನ ಪಟ್ಟಣವಾಗಿದ್ದು" ಸಮಾರ್ಯ ಪಟ್ಟಣದ ಮೂಲತಃ ಹೆಸರಾದ ಹಳೆಯ ರಾಜಧಾನಿಯಾದ ಸಬಾಸ್ಟೆ[20] ಪಟ್ಟಣ ಎಂದು ಕರೆಯಲ್ಪಟ್ಟದ್ದಾಗಿದೆ ಎಂದು ಅನೇಕ ಪಂಡಿತರು ಖಚಿತಪಡಿಸುತ್ತಾರೆ. ಇತರರೂ ಕೂಡಾ ಅದಕ್ಕೆ ಸಮಾನವಾಗಿ ಒಪ್ಪಿಕೊಳ್ಳುವಂತೆ ಫಿಲಿಪ್ಪನು ಇನ್ನೊಂದು ಪಟ್ಟಣಕ್ಕೆ[21] ಹೋದನು ಅದು ಬಹುಶಃ ಸಖರ್ ಎಂಬುದಾಗಿದ್ದು ಯೇಸುವಿನ ವಿಚಾರವು ಸಮಾರ್ಯದವರು ಕೊಯ್ಲಿಗೆ ಬಂದ ಹೊಲದಲ್ಲಿನ ಬೆಳೆಯ ಹಾಗೆ ಇರುವರು ಎಂದು ಹೇಳಲು ಪ್ರೇರೆಪಿಸಿತು (ಯೋಹಾನ 4:35). ಬಹುಶಃ ದೇವರ ಕೊಡುವಿಕೆಯಿಂದ, ಫಿಲಿಪ್ಪನು ಈ ಸುಗ್ಗಿಯ ಬೆಳೆಯನ್ನು ಕೊಯ್ಯಲು ಬಂದನು.

ಅಪೊಸ್ತಲರು ತಮ್ಮ ಕೈಗಳನ್ನು ಫಿಲಿಪ್ಪನ[22] ಮೇಲೆ ಇಟ್ಟಂದಿನಿಂದ, ಸ್ತೇಪನನಂತೆ, ಆತನೂ ಕೂಡಾ ಅದ್ಭುತಕಾರ್ಯಗಳನ್ನು ಮಾಡುವಲ್ಲಿ ಸಮರ್ಥನಾದನು (6:8). ಈ ಅದ್ಭುತಕಾರ್ಯಗಳು ಆತನಿಗೆ ಸಿದ್ಧವಾಗಿರುವ ವೀಕ್ಷಕರ ಭರವಸೆಯನ್ನು ಕೊಟ್ಟಿತು ಮತ್ತು ಸಿಂಧುತ್ವನ್ನೂ ಒದಗಿಸಿತು.[23] ನಾವು ಓದುವಂತೆ,

> ಗುಂಪಾಗಿ ಕೂಡಿದ ಜನಗಳು ಫಿಲಿಪ್ಪನ ಮಾತುಗಳನ್ನು ಕೇಳಿ ಅವನು ಮಾಡಿದ ಕಾರ್ಯಗಳನ್ನು ನೋಡಿ ಅವನು ಹೇಳಿದ ಸಂಗತಿಗಳಿಗೆ ಏಕಮನಸ್ಸಾಗಿ ಲಕ್ಷಕೊಟ್ಟರು. ಯಾಕೆಂದರೆ ಅನೇಕರೊಳಗಿಂದ ದೆವ್ವಗಳು ಮಹಾ ಶಬ್ಧದಿಂದ[24] ಕೂಗಿ ಹೊರಗೆ

> ಬಂದವು; ಮತ್ತು ಅನೇಕ ಪಾರ್ಶ್ವವಾಯುರೋಗಿಗಳೂ ಕುಂಟರೂ ಸ್ವಸ್ಥಮಾಡಲ್ಪಟ್ಟರು.[25] ಆ ಪಟ್ಟಣದಲ್ಲಿ ಬಹುಸಂತೋಷವಾಯಿತು (ವಚನಗಳು 6-8).

ಪಟ್ಟಣದಲ್ಲಿರುವವರೆಲ್ಲರೂ ಸಂತೋಷಕರವಾಗಿರಲಿಲ್ಲ. ಹೇಗೋ ಫಿಲಿಪ್ಪನು ಅಲ್ಲಿ ಬರುವ ಮಧ್ಯೆಯೇ ಇನ್ನೊಬ್ಬ ಮನುಷ್ಯನು ಅಲ್ಲಿ ಆಕರ್ಷಣೆಯ ಕೇಂದ್ರವಾಗಿದ್ದನು:

> ಆದರೆ ಕೆಲವು ಕಾಲದಿಂದ ಆ ಪಟ್ಟಣದಲ್ಲಿದ್ದ ಸೀಮೋನನೆಂಬ ಮನುಷ್ಯನು ತಾನು ಏನೋ ಒಬ್ಬ ಮಹಾತ್ಮನೆಂದು ಹೇಳಿಕೊಂಡು ಮಂತ್ರತಂತ್ರಗಳನ್ನು ನಡಿಸಿ[26] ಸಮಾರ್ಯದ ಜನರಲ್ಲಿ ಬೆರಗನ್ನು ಹುಟ್ಟಿಸುತ್ತಿದ್ದನು. ಚಿಕ್ಕವರು ಮೊದಲುಗೊಂಡು ದೊಡ್ಡವರ ಪರ್ಯಂತರ ಎಲ್ಲರೂ - ಇವನು ಮಹಾಶಕ್ತಿ ಎನಿಸಿಕೊಂಡಿರುವ ದೇವರ ಶಕ್ತಿಯೇ ಎಂದು ಹೇಳುತ್ತಾ ಅವನಿಗೆ ಲಕ್ಷ್ಯಕೊಡುತ್ತಿದ್ದರು. ಬಹುಕಾಲದಿಂದಲೂ ಅವನು ಮಂತ್ರತಂತ್ರಗಳನ್ನು ನಡಿಸಿ ಜನರಲ್ಲಿ ಬೆರಗನ್ನು ಹುಟ್ಟಿಸಿದ್ದ ಕಾರಣದಿಂದ ಅವರು ಅವನಿಗೆ ಲಕ್ಷ್ಯಕೊಡುತ್ತಿದ್ದರು (ವಚನಗಳು 9-11).

ಸಿಮೋನನು ಸಮಾರ್ಯದವರಿಗೆ ಹೇಗೆ ಮೋಸಮಾಡುತ್ತಿದ್ದನು ಎಂಬುದನ್ನು ನಾವು ಓದುವಾಗ, ಅದು ಹೇಗೆ ಸಾಧ್ಯ ಎಂದು ಆಶ್ಚರ್ಯಪಡುತ್ತೇವೆ. ಸಮಾರ್ಯದವರು ಯೆಹೂದಿಗಳು ಆರಾಧಿಸುವ ದೇವರನ್ನೇ ಆರಾಧಿಸುತ್ತಿದ್ದರು. ಸಮಾರ್ಯದವರ ಬೈಬಲ್ ಹಳೆಯ ಒಡಂಬಡಿಕೆಯ ಮೊದಲ ಐದು ಪುಸ್ತಕಗಳು ಆಗಿದ್ದವು - ಮತ್ತು ಆ ಪುಸ್ತಕಗಳು ಮಂತ್ರಗಳ ಬಗೆಗೆ ವಿರೋಧ ವ್ಯಕ್ತಪಡಿಸುತ್ತಾ ಬಲವಾಗಿ ಮಾತನಾಡುವಂತವುಗಳಾಗಿದ್ದವು (ನೋಡಿರಿ ವಿಮೋಚನಕಾಂಡ 22:18; ಧರ್ಮೋಪದೇಶಕಾಂಡ 18:10-12). ಸಿಮೋನನಲ್ಲಿನ ನಂಬಿಕೆಯ ಜೊತೆ ಯೆಹೋವ ದೇವರ ನಂಬಿಕೆಯು ಹೇಗೆ ಒಂದರ ಜೊತೆ ಒಂದು ಇರುವವು ಎಂದು ನಾವು ಆಶ್ಚರ್ಯಪಡುತ್ತೇವೆ. ನಂತರ ನಮ್ಮ ಸುತ್ತಲಿರುವ ಜಗತ್ತಿನ ಮೇಲೆ ನಮ್ಮ ದೃಷ್ಟಿಯನ್ನು ಹರಿಸುವಾ. ಆಗ ಅದನ್ನು ಅರ್ಥಮಾಡಿಕೊಳ್ಳಲು ನಮಗೇನೂ ಅಷ್ಟೊಂದು ಕಷ್ಟ ಸಾಧ್ಯವಾಗುವುದಿಲ್ಲ. ಪ್ರತಿಶತ 90 ರಷ್ಟು ಜನರು ದೇವರಲ್ಲಿ ನಂಬಿಕೆಯಿಟ್ಟಿದ್ದಾಗಿ ಪ್ರತಿಪಾದಿಸುತ್ತಾರೆ, ಆದರೆ ಮೂಢನಂಬಿಕೆಗಳು ಸಾಕಷ್ಟು ತುಂಬಿಕೊಂಡಿವೆ. ಹೆಚ್ಚೂ ಕಡಿಮೆ ಎಲ್ಲ ದಿನ ಪತ್ರಿಕೆಗಳೂ ಮತ್ತು ಮಾಸಪತ್ರಿಕೆಗಳೂ ತಮ್ಮದೇ ಆದ ಭವಿಷ್ಯದ ಸಾಲುಗಳನ್ನು ಹೊಂದಿವೆ. "ಅತೀಂದ್ರಿಯ ಶಕ್ತಿಯ" ಸಲಹೆಗಾರರು ಒಂದು ವರ್ಷಕ್ಕೆ ಮಿಲಿಯ ಡಾಲರನ್ನು ತರುವವರಾಗಿದ್ದಾರೆ. "New Age" ಪ್ರಚಾರವು ದೇಶದುದ್ದಕ್ಕೂ ಹರಿಯುತ್ತಿದೆ. P. T. Barnum[27] ಒಂದೆಡೆ ಹೀಗೆ ಹೇಳಿದ್ದಾನೆ, "ಪ್ರತಿಯೊಂದು ನಿಮಿಷಕ್ಕೂ ಅಲ್ಲೊಬ್ಬ ಹೀರುವವನು (ಮೇಲೆ ಹೇಳಲ್ಪಟ್ಟ ಜನರು) ಹುಟ್ಟಿಕೊಳ್ಳುತ್ತಾನೆ" ಎಂದು. ಜಗತ್ತು ತನ್ನದೆ ಆದ ಸಿಮೋನರನ್ನು ಹೊಂದಿದೆ ಮತ್ತು ಸುಲಭವಾಗಿ ವಂಚಿಸುವ ಜನರನ್ನು ನಂಬಲು ಸಿದ್ಧರಾಗಿರುತ್ತದೆ!

ಫಿಲಿಪ್ಪನು ನಿಜವಾದ ಅದ್ಭುತಗಳನ್ನು ಮಾಡಲು ಬಂದಾಗ, ಸಿಮೋನನು ಮಾಡುತ್ತಿರುವ ಮೋಸದ ಅದ್ಭುತಗಳಲ್ಲಿ ಏನೂ ಇಲ್ಲದ್ದನ್ನು ಕಾಣುತ್ತೇವೆ.[28] "ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು, ಗಂಡಸರು ಹೆಂಗಸರು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು" (ವಚನ 12). ಯೆಹೂದಿಗಳಂತೆ (2:38), ಸಮಾರ್ಯದವರೂ ನಂಬಿದರು ಮತ್ತು ದೀಕ್ಷಾಸ್ನಾನಮಾಡಿಸಿಕೊಂಡರು.

ಫಿಲಿಪ್ಪನ ಸಂದೇಶದ ಶಕ್ತಿಯು ತನ್ನ ಪ್ರಭಾವವನ್ನು ಸೀಮೋನನ ಮೇಲೆ ಗಣನೀಯವಾಗಿ ಬೀರಿತು: "ಸೀಮೋನನ ಕೂಡಾ ನಂಬಿ ದೀಕ್ಷಾಸ್ನಾನಮಾಡಿಸಿಕೊಂಡು ಫಿಲಿಪ್ಪನ ಸಂಗಡ ಯಾವಾಗಲೂ ಇದ್ದು ಮಹತ್ಕಾರ್ಯಗಳು ಉಂಟಾಗುವುದನ್ನು ನೋಡಿ ಬೆರಗಾದನು"

(ವಚನ 13).[29] ಕೆಲವರು ಸೀಮೋನನ ಪರಿವರ್ತನೆಯ ಬಗೆಗೆ ಕೆಲ ಸಾವಾಲುಗಳನ್ನು ಮಾಡುತ್ತಾರೆ, ಆತನು ಮೊದಲಾಗಿಯೇ ಪರಿವರ್ತನೆಹೊಂದಿದ್ದಕ್ಕಾಗಿ ತಮ್ಮ ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಸಿಮೋನನು ಕೂಡಾ ಇತರ ಸಮಾರ್ಯದವರು ಮಾಡಿದ ಹಾಗೆ ಅದೇ ರೀತಿಯಲ್ಲಿ ಮತ್ತು ಅದೆ ಉದ್ದೇಶದಿಂದ ಮಾಡಿದನು.

ಸಿಮೋನನನ್ನು ಒಳಗೊಂಡು ರಕ್ಷಣೆಯು ಸಮಾರ್ಯಕ್ಕೆ ಬಂದಿತು! ಫಿಲಿಪ್ಪನ ಕಾರ್ಯವು ದೇವರಿಂದ ಒಪ್ಪಿಗೆ ಪಡೆದದ್ದು ಮತ್ತು ಸಮಾರ್ಯದ ಕ್ರೈಸ್ತರು ಯೆಹೂದಿ ಕ್ರೈಸ್ತರೊಂದಿಗೆ ಸಮಾನವಾಗಿ ನಿಲ್ಲಬೇಕು ಎಂಬುದನ್ನು ಯೆಹೂದಿಗಳು ಮತ್ತು ಸಮಾರ್ಯದವರಿಬ್ಬರಿಗೂ ತಿಳಿಯಬೇಕೆಂಬುದು ಬಲು ಮಹತ್ವವಾದದ್ದು. ಇದಕ್ಕನುಗುಣವಾಗಿ ನಾವು ಓದುವುದೇನೆಂದರೆ "ಸಮಾರ್ಯದವರು ದೇವರ ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಕೇಳಿ ಪೇತ್ರ ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು" (ವಚನ 14). ಅಪೊಸ್ತಲರು ಯೆರೂಸಲೇಮಿನಲ್ಲಿ ಜೀವನ ಮರಣದ ಹೋರಾಟದಲ್ಲಿದ್ದರು, ಆದರೆ ಅವರ ಉತ್ತರದಲ್ಲಿ ಏನು ಸಂಭವಿಸುತ್ತಿದೆ ಎಂಬುದರ ಮಹತ್ವವನ್ನು ಅವರು ಅರಿತ್ತಿದ್ದರು. ಆಗ ಅವರು ತಮ್ಮ ಇಬ್ಬರು ಒಳ್ಳೇಯ ಜನರನ್ನು ಅಂದರೆ ಪೇತ್ರ ಯೋಹಾನರನ್ನು ಅಲ್ಲಿ ಕಳುಹಿಸಿದರು.[30]

ಅವರು ಈ ಪ್ರತಿನಿಧಿಗಳನ್ನು ಯಾತಕ್ಕಾಗಿ ಕಳುಹಿಸಿದರು? ನೇಮಿಸಿದ ಕೆಲಸವು ದೇವರಿಂದ ಒಪ್ಪಿಗೆಯೊದದ್ದು ಎಂದು ಖಚಿತವಿತ್ತೋ ಅಲ್ಲವೋ ಎಂಬುದನ್ನು ಪರಿಕ್ಷಿಸಬಯಸಿದ್ದರೋ? ಹಾಗಿದ್ದಾದರೆ, ಅವರನ್ನು ಪ್ರೇರೇಪಿಸುವದರಲ್ಲಿ ದೇವರ "ಒಪ್ಪಿಗೆಯ ಮುದ್ರೆಯನ್ನು" ಅವರು ನೋಡುವವರಾಗಿದ್ದರು:

> ... ಪೇತ್ರ ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು. ಇವರು ಅಲ್ಲಿಗೆ ಬಂದು ಆ ಜನರಿಗೆ ಪವಿತ್ರಾತ್ಮವರವು ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥನೆಮಾಡಿದರು. ಯಾಕೆಂದರೆ ಆ ವರವು ಅವರಲ್ಲಿ ಒಬ್ಬರ ಮೇಲಾದರು ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದಿಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು. ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪರಿಶುದ್ಧಾತ್ಮವರನ್ನು ಹೊಂದಿದರು (ವಚನಗಳು 14ಬಿ-17).

ವಚನ 16ನ್ನು ಓದಲು ವಿಚಿತ್ರವೆನ್ನಿಸುತ್ತದೆ. "ಯಾಕೆಂದರೆ ಆ ವರವು ಪರಿಶುದ್ಧಾತ್ಮನ ವರವು ಅವರಲ್ಲಿ ಒಬ್ಬರ ಮೇಲಾದರು ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು." "ದೇವರು ತಾರತಮ್ಯ ತೋರಿಸುವ ದೇವರಲ್ಲ," ಸಮಾರ್ಯದವರು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ, ಅವರು ಖಚಿತವಾಗಿ ಯೆಹೂದಿಗಳು ಪಡೆದಂತಹ ಆಶೀರ್ವಾದಗಳನ್ನೇ ಅವರೂ ಪಡೆದರು, ಅದು ಪರಿಶುದ್ಧಾತ್ಮನ ವರವನ್ನು ಒಳಗೊಂಡಿತ್ತು (2:38; 5:32).[31] ಹೀಗಿದ್ದಾಗ ಯಾಕೆ ಲೂಕನು ಅವರಲ್ಲಿ ಒಬ್ಬರ ಮೇಲಾದರು ಇನ್ನೂ ಪರಿಶುದ್ಧಾತ್ಮನ ವರವು ಬಂದಿರಲಿ ಎಂದು ಹೇಳಿದನು. ನಿಶ್ಚಿತವಾದ ವ್ಯಕ್ತಿಗಳ ಮೇಲೆ ಆತ್ಮನ "ಬೀಳುವಿಕೆಯು" ಎಂಬ ಪದಗುಚ್ಛವು ಆತ್ಮನು ವಾಸಿಸುವುದರ ಎದುರುಗೊಳ್ಳುವಿಕೆಯ (ಯಾವಾಗ ಒಬ್ಬನು ಆತ್ಮೀಕವಾಗಿ ದೀಕ್ಷಾಸ್ನಾನ ಹೊಂದಿದಾಗ) ಜೊತೆ ಸಂಬಂಧವನ್ನು ಇರಿಸುವದಕ್ಕೆ ಸಾಮಾನ್ಯವಾಗಿ ಬಳಿಕೆಯಾದಂತದ್ದು ಆಗಿದೆ. ಇನ್ನೊಂದೆಡೆಯಲ್ಲಿ ಈ ಪದವು ಆತ್ಮನು ವ್ಯಕ್ತಿಗಳ ಮೇಲೆ ಬರುವಿಕೆಯನ್ನು ಸೂಚಿಸುವ ಮತ್ತು ಅದ್ಭುತಕಾರ್ಯಗಳನ್ನು ಮಾಡಲು ಸಮರ್ಥರಾಗುವಂತೆ ಮಾಡುವದನ್ನು ಸೂಚಿಸಲು ಬಳಸುವುದಾಗಿದೆ (ಹೋಲಿಸು 10:44; 11:15). ಲೂಕನು, ಪೇತ್ರ ಮತ್ತು ಯೋಹಾನರು ಬರುವತನಕ ಸಮಾರ್ಯದ ಯಾವುದೇ ವ್ಯಕ್ತಿಯು ಪರಿಶುದ್ಧಾತ್ಮನವರವನ್ನು ಅದ್ಭುತಕಾರ್ಯಗಳನ್ನು ಮಾಡುವ ಸಮರ್ಥ್ಯವನ್ನು ಹೊಂದಿರಲಿಲ್ಲ ಎಂದು

ಹೇಳುತ್ತಾನೆ. ವರವಾಗಿ ಕೊಡಲಾದ ಅದ್ಭುತೀಯ ಸಾಮರ್ಥ್ಯವು ವಚನ 18ರಲ್ಲಿ ಲೂಕನು ಸೂಚಿಸುವವನಾಗಿದ್ದಾನೆ: "ಪವಿತ್ರಾತ್ಮ ದಾನವಾಗುವದನ್ನು ಸೀಮೋನನು *ನೋಡಿದನು.* ..." (ಒತ್ತಿ ಹೇಳಿದ್ದು ನನ್ನದು.) ಆತನ ವಾಸಿಸುವಿಕೆಯ ದಾನವು ಹೊರಗೆ ಕಾಣುವಂತಹ ಯಾವುದೇ ವಿಷೇಶವಾದ ಚಿನ್ಹೆಗಳೊಡನೆ ಜೊತೆ ಕೊಡುವುದಲ್ಲ; ಬದಲಾಗಿ ಅದ್ಭುತದ ಆ ದಾನವು ಅದ್ಭುತಗಳ ಸಾಮರ್ಥ್ಯವಾಗಿದೆ.

ಇತ್ತೀಚೆಗಷ್ಟೇ ಅಪೊಸ್ತಲರು ತಮ್ಮ ಕೈಗಳನ್ನು ಸ್ತೇಫನನ ಮತ್ತು ಫಿಲಿಪ್ಪರ ಮೇಲೆ ಇಟ್ಟಿದ್ದರು (6:6). ಅದ್ಭುತೀಯ ಶಕ್ತಿಯನ್ನು ಕೊಟ್ಟರು (6:8; 8:6-8). "ಪೇತ್ರ ಮತ್ತು ಯೋಹಾನರು ... ಪವಿತ್ರಾತ್ಮವರವು ಅವರಿಗೆ ದೊರೆಯಬೇಕೆಂದು ಅವರಿಗೋಸ್ಕರ ಪ್ರಾರ್ಥಿಸಿದರು. ... ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮ ವರವನ್ನು ಹೊಂದಿದರು" (8:14, 15, 17).

ಇಲ್ಲಿರುವ ಸೂಚನೆಯನ್ನು ಗಮನಿಸಿರಿ ಫಿಲಿಪ್ಪನು ಅಪೊಸ್ತಲರು ಕೈಯಿಡುವ ಮೂಲಕ ಹೊಂದಬಹುದಾದ ವಿಷೇಶ ವರದಲ್ಲಿ ಆತನು ವಿಫಲನಾದನು.[32] ಬದಲಾಗಿ ಅಪೊಸ್ತಲರು ಅಲ್ಲಿ ಬಂದು ತಮ್ಮ ಕೈಗಳನ್ನು ಜನರ ಮೇಲೆ ಇಟ್ಟರು ಮತ್ತು ಅವರಿಗೆ ವಿಷೇಶ ವರಗಳನ್ನು ಕೊಟ್ಟರು. ವಚನ 18 "*ಅಪೊಸ್ತಲರು* ಕೈಗಳನ್ನಿಡುವುದರ ಮೂಲಕವಾಗಿ ಪವಿತ್ರಾತ್ಮ ದಾನವಾಗುವದು." (ಎಂದು ಒತ್ತಿ ಹೇಳುತ್ತದೆ.) ಅಪೊಸ್ತಲರೂ ಮತ್ತು ಅವರ ಮೇಲೆ ಕೈಯಿಟ್ಟವರು ಮರಣಹೊಂದಿದ ನಂತರ ಅದ್ಭುತಗಳನ್ನು ಪ್ರದರ್ಶಿಸುವ ಸಾಮರ್ಥವು ಕೊನೆಯಾಯಿತು.[33]

ಬಹುಶಃ ಪೇತ್ರ ಮತ್ತು ಯೋಹಾನರು ಸಮಾರ್ಯಕ್ಕೆ ವಿಷೇಶವಾದ ಅದ್ಭುತೀಯ ಶಕ್ತಿಯನ್ನು ದಾನಮಾಡುವ ನಿಟ್ಟಿನಲ್ಲಿ ಪ್ರಯಾಣಮಾಡುವಾಗ ಅವರು ಎರಡು ಉದ್ದೇಶಗಳನ್ನು ಹೊಂದಿದ್ದರು. ಮೊದಲನೆಯದು, ಸಮಾರ್ಯವೂ ಕೂಡಾ ಅಪೊಸ್ತಲರು ಹೊಂದಿದಂತೆಯೇ ಆತನು ಸಭೆಯ ಒಂದು ಭಾಗವಾಗಿದೆ ಎಂದು ಒಪ್ಪಿಕೊಂಡ ದೇವರ ಉದ್ದೇಶವನ್ನು ಅವರ ಕೃತಿಗಳು ಸೂಚಿಸುತ್ತಿದ್ದವು.[34] ಎರಡನೆಯದಾಗಿ, ಈ ವರಗಳ ದಾನವು ಸಮಾರ್ಯದ ಕ್ರೈಸ್ತರು ಪೇತ್ರ, ಯೋಹಾನ ಮತ್ತು ಫಿಲಿಪ್ಪರು ಹೋದ ಮೇಲೆ ತಾವೇ ಸ್ವಂತ ತಮ್ಮ ಕಾರ್ಯಗಳನ್ನು ಮಾಡಿಕೊಳ್ಳಲು ಸಮರ್ಥರನ್ನಾಗಿಸುವುದೇ ಆಗಿದೆ. ದೇವರ ಯೋಜನೆಯಲ್ಲಿ, ಫಿಲಿಪ್ಪನು ಬೇಗನೇ ಅಲ್ಲಿಂದ ಬಿಡುವವನಿದ್ದನು (8:26).

ವಚನ 18ರಲ್ಲಿ ನಾವು ಮತ್ತೆ ಸೀಮೋನನ ಗಾಥೆಗೆ ಬರುತ್ತೇವೆ. ಆತನು ಪೇತ್ರ ಮತ್ತು ಯೋಹಾನರು ಅದ್ಭುತಗಳ ವರಗಳ ದಾನವನ್ನು ನೋಡಿದಾಗ, ತಾನು ಜನರೆಲ್ಲರ ಮಧ್ಯೆ ಎದ್ದು ಕಾಣಬೇಕೆಂಬ ಆಶೆಯು ಸ್ಪಷ್ಟವಾಯಿತು:

> ಅಪೊಸ್ತಲರು ಕೈಗಳನ್ನಿಡುವುದರ ಮೂಲಕವಾಗಿ[35] ಪವಿತ್ರಾತ್ಮ ದಾನವಾಗುವುದನ್ನು ಸೀಮೋನನು ನೋಡಿ ಹಣವನ್ನು ತಂದು[36] ಅವರ ಮುಂದಿಟ್ಟು - ನಾನು ಯಾರ ಮೇಲೆ ಕೈಗಳನ್ನಿಡುತ್ತೇನೋ ಅವರು ಪವಿತ್ರಾತ್ಮವರವನ್ನು ಹೊಂದುವಂತೆ ಈ ಅಧಿಕಾರವನ್ನು ನನಗೂ ಕೊಡಿರಿ (ವಚನಗಳು 18, 19) ಅಂದನು.

ಅವನಿಗೆ ಈ ಸಾಮರ್ಥವು ಯಾಕೆ ಬೇಕಿತ್ತು? ಪೇತ್ರ ಮತ್ತು ಯೋಹಾನರಿಗೆ ಆತನು ಮಾಡಿದ ವಿನಂತಿಯು ಅಕ್ಷರಸಹ, ನಾವೆಲ್ಲರೂ ನಿಶ್ಚಯವಾಗಿ ಸೀಮೋನನು ತಪ್ಪು ಎಂದು ಹೇಳಬಹುದು, ಖಂಡಿತವಾಗಿ ತಪ್ಪಾದುದು.

> ಆದರೆ ಪೇತ್ರನು ಅವನಿಗೆ, "ನಿನ್ನ ಬೆಳ್ಳಿಯು ನಿನ್ನ ಕೂಡ ಹಾಳಾಗಿ ಹೋಗಲಿ.[37] ದೇವರ ವರವನ್ನು[38] ಹಣಕ್ಕೆ ಕೊಂಡುಕೊಳ್ಳಬಹುದೆಂದು ಭಾವಿಸುತ್ತೀಯೋ? ಈ ಕಾರ್ಯದಲ್ಲಿ ನಿನಗೆ ಭಾಗವೂ ಇಲ್ಲ,[39] ಪಾಲೂ ಇಲ್ಲ; ನಿನ್ನ ಹೃದಯವು ದೇವರ ಮುಂದೆ ಸರಿಯಲ್ಲ.[40] ಆದುದರಿಂದ ಈ ನಿನ್ನ ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ

ತಿರುಗಿಕೊಂಡು ಕರ್ತನು ನಿನ್ನ ಮನಸ್ಸಿನ ಆಲೋಚನೆಯನ್ನು ಕ್ಷಮಿಸುವನೋ ಏನೋ ಆತನನ್ನು ಬೇಡಿಕೋ. ಯಾಕೆಂದರೆ ನೀನು ಹಾನಿಕರವಾದ ವಿಷವೂ ದುಷ್ಟತ್ವದಲ್ಲಿ ಬಿಗಿಯುವ ಬಂಧನವೂ ಆಗಿರುವವನೆಂದು ಕಾಣುತ್ತದೆ ಅಂದನು'' (ವಚನಗಳು 20-23).[41]

ಕೆಲ ಲೇಖಕರು ಪೇತ್ರನು ಹೇಳುವ ಬಲವಾದ ಮಾತುಗಳತ್ತ ನೋಡುತ್ತಾರೆ ಮತ್ತು ಹೇಳುತ್ತಾರೆ, "ನಾನು ಹೇಳುತ್ತೇನೆ, ಸೀಮೋನನು ಎಂದಿಗೂ ನಿಜವಾಗಿಯೂ ಪರಿವರ್ತಿತನಾದವನಲ್ಲ'' ಎಂದು! ಪೇತ್ರನ ಮಾತುಗಳು ಸೀಮೋನನು ಎಂದಿಗೂ ಕ್ರೈಸ್ತನಾಗಲಿಲ್ಲ ಎಂದು ಸಾಧಿಸುವುದಿಲ್ಲ. ಬದಲಾಗಿ, ಪ್ರತಿಯೊಬ್ಬ ಹೊಸ ಪರಿವರ್ತಿತನು ಅರಿತುಕೊಳ್ಳಲು ಅವಶ್ಯವಿರುವ ಮೂರು ಮಹತ್ವದ ಸತ್ಯಾಂಶಗಳನ್ನು ಒತ್ತಿ ಹೇಳುತ್ತದೆ: (1) ನಾವು ದೇವರ ಮಕ್ಕಳಾಗಿದ್ದಾಗ್ಯೂ, ಕೆಲಸಾರಿ ನಾವು ಪಾಪದಲ್ಲಿ ಮರಳುವವರಾಗಿದ್ದೇವೆ (ಯಾಕೋಬ 5:19, 20).[42] (2) ಕ್ರೈಸ್ತರಾದ ಮೇಲೆ, ನಾವು ದೇಹದಲ್ಲಿ ಅದೇ ತರದ ಬಲಹೀನತೆಯನ್ನು ಹೊಂದಿರುತ್ತೇವೆ. ನಾನು ತಿಳಿದಂತೆ ಪೌಲನು "ದೊಡ್ಡ ಸಂತ'' ನಾಗುವುದಕ್ಕೆ ಸಮೀಪವಾಗಿದ್ದರೂ ಕೂಡಾ, ಆತನು ದೇಹದ ಶೋಧನೆಯ ಜೊತೆಯಲ್ಲಿ ಹೋರಾಡಿದನು (ರೋಮಾಪುರ 7) ಮತ್ತು ಆತನ ದೇಹವು "ಜಜ್ಜಲ್ಪಡುವಿಕೆ''[43] ನಿಯಂತ್ರಣಕ್ಕೆ ಒಪ್ಪಿಸಲ್ಪಟ್ಟಿತ್ತು (1 ಕೊರಿಂಥ 9:27). ದೇವರು ನಮ್ಮ ಬಲಹೀನತೆಯನ್ನು ತೆಗೆದುಹಾಕುವುದಿಲ್ಲ, ಆದರೆ ಬದಲಾಗಿ ಅದರ ಮೇಲೆ ಜಯಸಾಧಿಸುವುದಕ್ಕೆ ನಮಗೆ ಬೇಕಾದ ಬಲವನ್ನು ಕೊಡುತ್ತಾನೆ. ಹೊಸ ಕ್ರೈಸ್ತರೇ, ನಿಮಗೆ ಬಲಹೀನತೆಗಳು ಇನ್ನೂ ಇರುತ್ತವೆ ಎಂಬ ಅರಿವು ಉಳ್ಳವರಾಗಿರ್ರಿ, ಮತ್ತು ನೀವು ಶೋಧನೆಗೆ ಒಳಗಾಗುತ್ತಿರುವ ಪರಿಸ್ಥಿತಿಗಳಿಂದ ದೂರವಿರ್ರಿ (1 ಕೊರಿಂಥ 10:12)! (3) ಕ್ರೈಸ್ತರಾದಂತ ನಾವು ಘೋರ ಪಾಪಿಗಳಾಗಿದ್ದಾಗ್ಯೂ, ನಾವು ಕ್ರಿಸ್ತನ ಬಳಿಗೆ ಮರಳಬಹುದು!

ಪೇತ್ರನು ಸೀಮೋನನಿಗೆ "ಆದುದರಿಂದ ಈ ನಿನ್ನ ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಕರ್ತನು ನಿನ್ನ ಮನಸ್ಸಿನ ಆಲೋಚನೆಯನ್ನು ಕ್ಷಮಿಸುವನೋ ಏನೋ ಆತನನ್ನು ಬೇಡಿಕೋ'' (ವಚನ 22) ಎಂದು ಹೇಳಿದನು. "ಕ್ಷಮಿಸುವನೋ ಏನೋ'' ಎಂಬ ಮಾತುಗಳು ದೇವರ ಕ್ಷಮಿಸುವ ಸಾಮರ್ಥವನ್ನು ಸೂಚಿಸುವುದಿಲ್ಲ, ಆದರೆ ಸೀಮೋನನ ಪಶ್ಚಾತ್ತಾಪದ ಸಾಮರ್ಥವನ್ನು ಸೂಚಿಸುವುದಾಗಿದೆ. ಅವುಗಳು ಸೀಮೋನನ್ನು ಪ್ರೋತ್ಸಾಹಿಸುವುದಕ್ಕೆ ಕೊಡಲ್ಪಟ್ಟಿವೆಯೇ ಹೊರತು ಎದೆಗುಂದಿಸಲು ಅಲ್ಲ (ಹೋಲಿಸು ಯೋವೇಲ 2:12-14). ಈ ಪ್ರಯುಕ್ತವಾಗಿ ಪೇತ್ರನು, "ಒಂದು ವೇಳೆ ನೀನು ಪಶ್ಚಾತ್ತಾಪಪಟ್ಟರೆ, ನಿನ್ನ ಕಹಿಯಾದ ಹೃದಯವೂ ಸಿಹಿಯಾಗುವದು! ನೀನು ಪಶ್ಚಾತ್ತಾಪಪಟ್ಟರೆ, ಪಾಪದ ಸಂಕೋಲೆಯು ತಿರುಗಿ ಕಳಚಿ ಬೀಳುವದು'' ಎಂದು ಹೇಳುತ್ತಾನೆ!

ಪೇತ್ರನ ಮಾತುಗಳಲ್ಲಿ ಸೀಮೋನ ತನ್ನ ಸ್ಥಿತಿಯು ಎಷ್ಟು ಕುಂದಿಹೋಗಿತ್ತೆಂಬುದನ್ನು ತಿಳಿಯುವಂತಹ ಆಘಾತಕ್ಕೆ ಒಳಗಾಗಿದ್ದನು ಎಂಬುದನ್ನು ಸೂಚಿಸುವಂತವುಗಳಾಗಿವೆ, ಅವರು ಅದರ ಅಪೇಕ್ಷಿತ ಪರಿಣಾಮವನ್ನು ಹೊಂದಿದರು. "ಆದರೆ ಸೀಮೋನನು ನೀವು ಹೇಳಿರುವ ಸಂಗತಿಗಳಲ್ಲಿ ಯಾವುದೂ ನನ್ನ ಮೇಲೆ ಬಾರದಂತೆ ನನಗೋಸ್ಕರ ನೀವೇ ಕರ್ತನಲ್ಲಿ ಬೇಡಿಕೊಳ್ಳಿರಿ ಎಂದು ಹೇಳಿದನು'' (ವಚನ 24). ತಿರುಗೊಂದಾವರ್ತಿ, ಸೀಮೋನನ ಟೀಕಾಕಾರರು ಆತನ ಕೃತಿಗಳ ಮೇಲೆ ಅತಿಖಾರವಾಗಿ ಮಾತನಾಡಿದ್ದಾರೆ: "ತನ್ನಷ್ಟಕ್ಕೆ ತಾನೇ ಪ್ರಾರ್ಥಿಸುವ ಬದಲಾಗಿ ಅವರು ವಿಷದಿಕರಿಸುತ್ತಾ ಸೀಮೋನನು ಪೇತ್ರ ಮತ್ತು ಯೋಹಾನರನ್ನು ತನಗಾಗಿ ಪ್ರಾರ್ಥಿಸಲು ಕೇಳುತ್ತಾನೆ.'' ಸೀಮೋನನು ಪಶ್ಚಾತ್ತಾಪಪಡುವಲ್ಲಿ ಮತ್ತು ಪ್ರಾರ್ಥನೆಯಲ್ಲಿ ವಿಫಲನಾದನು ಎಂದು ಲೂಕನು ಹೇಳುವುದಿಲ್ಲ. ಬದಲಾಗಿ, ಆತನು ಸೀಮೋನನ ಕಳಕಳಿಯು ಬಲು ಶ್ರೇಷ್ಟವಾದದ್ದು ಅದು ಆತನು ತನಗೋಸ್ಕರ

ಪ್ರಾರ್ಥಿಸಲು ಅಪೊಸ್ತಲರಿಗೆ ಮೊರೆಯಿಟ್ಟದ್ದಾಗಿದೆ ಇದು ಆತನ ಸ್ವಂತ ಪ್ರಾರ್ಥನೆಯೊಂದಿಗೆ ಇತರರೂ ಪ್ರಾರ್ಥನೆ ಮಾಡುವಂತೆ ಒತ್ತಿ ಹೇಳುವುದಾಗಿದೆ. ನಮ್ಮ ಜೊತೆ ಕ್ರೈಸ್ತರನ್ನು ನಮಗಾಗಿ ಪ್ರಾರ್ಥಿಸಿರಿ ಎಂದು ಕೇಳುವುದು ತಪ್ಪೇನಲ್ಲ (ಯಾಕೋಬ 5:16).[44] ಸೀಮೋನನ ಕಳಕಳಿಯು ಸಹಜವಾದುದು ಮತ್ತು ಆತ್ಮೀಕವಾಗಿ ಪ್ರೇರೇಪಿಸಲ್ಪಟ್ಟದ್ದು ಆಗಿದೆ ಎಂದು ನಾನು ಸೂಚಿಸುವವನಾಗಿದ್ದೇನೆ ಮತ್ತು ಕೊನೆಯ ದೃಷ್ಯದಲ್ಲಿ ಮಾಜಿ ಮಂತ್ರಗಾರನಾದ ಸೀಮೋನನು ತನ್ನ ಮೊಣಕಾಲುಗಳ ಮೇಲೆ ಬಿದ್ದು ಪಶ್ಚಾತ್ತಾಪಪಟ್ಟನು.[45]

ಪೇತ್ರನು ಮತ್ತು ಯೋಹಾನರು ಹೊಸಕ್ರೈಸ್ತರೊಂದಿಗೆ ಮತ್ತು ಚುರುಕು ಬುದ್ಧಿಯುಳ್ಳವರೊಂದಿಗೆ ಇನ್ನೂ ಕೆಲ ದಿನಗಳನ್ನು ಕಳೆದರು, “ಹೀಗಿರಲಾಗಿ ಅವರು ಕರ್ತನ ವಾಕ್ಯವನ್ನು ಪ್ರಮಾಣಪೂರ್ವಕವಾಗಿ[46] ಹೇಳಿದ ಮೇಲೆ ಯೆರೂಸಲೇಮಿಗೆ ಹಿಂತಿರುಗಿ ಹೊರಟು ಸಮಾರ್ಯದವರ ಅನೇಕ ಊರುಗಳಲ್ಲಿ ಸುವಾರ್ತೆಯನ್ನು ಸಾರಿದರು” (ವಚನ 25)[47] ಅಪೊಸ್ತಲರಿಗೆ ಯೂದಾಯ ಸಮಾರ್ಯ ಮತ್ತು ಕೊನೆಯವರೆಗೂ ಸಾಕ್ಷಿಗಳಾಗಿರಬೇಕೆಂದು ಯೇಸುವು ಹೇಳಿದನು, ಆ ಮಾತುಗಳು ಈಗ ನಿಜವಾದವು. ಫಿಲಿಪ್ಪನಿಂದ ಸಮಾರ್ಯದ ಒಂದು ಪಟ್ಟಣದಲ್ಲಿ ಪ್ರಾರಂಭವಾದ ಬೆಂಕಿಯು ಎಲ್ಲ ಪ್ರಾಂತಗಳಲ್ಲಿ ಹರಡಿತು.

## ದಕ್ಷಿಣಕ್ಕೆ ಹರಡಿದ ಜ್ವಾಲೆ (8:26-40)

ಸುವಾರ್ತೆಯ ಜ್ವಾಲೆಯು ಯೆರೂಸಲೇಮಿನ ಉತ್ತರದಲ್ಲಿ ಮಾತ್ರ ಹರಡಲಿಲ್ಲ; ಇದು ದಕ್ಷಿಣಕ್ಕೂ ಹರಡಿತು. ವಚನ 26ರಿಂದ 40ರಲ್ಲಿ ಕಂಚುಕಿಯ ಸಂಭಾಷಣೆಯನ್ನು ನಾವು ನೋಡುತ್ತೇವೆ, ಆತನು ಒಳ್ಳೆಯ ವಾರ್ತೆಯ ಹಿನ್ನಲೆಯನ್ನು ಐಥಿಯೋಪ್ಯಕ್ಕೆ ತೆಗೆದುಕೊಂಡು ಹೋದನು. ಈ ಸಂಭಾಷಣೆಯನ್ನು, ನಾವು ನಮ್ಮ ಇನ್ನೊಂದು ಪಾಠದಲ್ಲಿ ವಿವರವಾಗಿ ಅಭ್ಯಸಿಸೋಣ, ಇದೊಂದು ಪರಿವರ್ತನೆಯ ಸೇತುವೆಯಾಗಿದೆ. ಕಂಚುಕಿಯು (ನಪುಂಸಕನು) ಬಹುಶಃ ಒಬ್ಬ ಅನ್ಯಜನಾಂಗದವನಿದ್ದು ಅ ನಂತರ ಆತನು ಬಹುಶ ಯೆಹೂದಿಯಾಗಿರಬೇಕು; ಇನ್ನೊಂದು ಮಾತಿನಲ್ಲಿ ಯೆಹೂದಿ ಮತಾವಲಂಬಿಗಳು ಅನ್ಯಜನರು ಮತ್ತು ಯೆಹೂದಿಗಳಿಗೆ ಬೋಧಿಸುವುದರ ಮಧ್ಯೆ ಇನ್ನೊಂದು ಸೇತುವೆ ಯಾಗಿದ್ದರು.[48] ಬಲು ಮುಖ್ಯವಾದದ್ದೆಂದರೆ, ಈ ಮನುಷ್ಯನ ಪರಿವರ್ತನೆಯ ನಂತರ, ರಕ್ಷಣಾ ಕಥೆಯನ್ನು ತನ್ನೊಡನೆ[49] ತೆಗೆದುಕೊಂಡು ಹೋಗುವ ಮೂಲಕ ಆತನು ಅಫ್ರಿಕಾದ ತನ್ನ ಮನೆಯಲ್ಲಿ ಮುಂದುವರೆಸಿದನು. ಯೇಸುವಿನ ಸಂದೇಶವು ಎಲ್ಲ ದಿಶೆಯಲ್ಲಿ ಹರಡತೊಡಗಿತು!

## ಮುಕ್ತಾಯ

ಇಂದು ಕೆಲ ಸಭೆಗಳು “ಬಂದೂಕಿನಡಿಯಲ್ಲಿನ” ವಿಚಾರಗಳಲ್ಲಿ ಸಂಕಟಪಡುತ್ತಿವೆ; ಹಳೆಯ ಪಶ್ಚಿಮದ, ಪಟ್ಟಣಗಳು ಕೆಲಸಾರಿ “ಕೆಟ್ಟಜನರೊಂದಿಗೆ” ವ್ಯವಹರಿಸುವುದಿಲ್ಲ, ಯಾಕೆಂದರೆ ಅವರು ಬಂದೂಕುಧಾರಿಗಳನ್ನು ಹೊಂದಿಕೊಂಡು ಬರುತ್ತಾರೆ ಮತ್ತು ಪಟ್ಟಣವನ್ನು ನಾಶಮಾಡುತ್ತಾರೆ. ಸಭೆಗಳೂ ಸಹ ಬೆಳೆಯಬೇಕಾದರೆ ಈ ರೀತಿಯ ಬಂದೂಕುಗಳನ್ನು (ಅವರು ಸಂಪೂರ್ಣವಾಗಿ ಕಾರ್ಯಮಾಡುವ ಸಂಬಳಪಡೆದ ಕೆಲಸಗಾರರು) ಹೊಂದಿರಬೇಕೆಂಬ ರೀತಿಯಲ್ಲಿ ಸೂಚಿಸುವುದಾಗಿದೆ. “ಒಂದು ವೇಳೆ ನಾವು ಸರಿಯಾದ ಜನರನ್ನು ತೆಗೆದುಕೊಂಡಿದ್ದೆ ಆದರೆ” ಅವನು “ನಮ್ಮ ಎಲ್ಲ ಸಮಸ್ಯೆಗಳನ್ನು ಪರಿಹರಿಸುವರು”[50] ಎಂದು ಅವರು ಯೋಚಿಸುವವರಾಗಿದ್ದಾರೆ. ಆದಿ ಸಭೆಯಲ್ಲಿ ಈ ಪ್ರವೃತ್ತಿಯು ಇರಲಿಲ್ಲ. ಲೂಕನು ಅವರನ್ನು “ಪೂರ್ಣಕೆಲಸಗಾರರು” (ಅಪೊಸ್ತಲರನ್ನು)[51] ಚದುರಿಹೋದವರಲ್ಲಿ ಇರಲಿಲ್ಲ ಎಂದು ಸ್ಪಷ್ಟಮಾಡಿದ್ದಾನೆ ಮತ್ತು ಈ ಅಸಾಮಾನ್ಯರಲ್ಲಿ “ಸಾಮಾನ್ಯ” ಸದಸ್ಯರು “ವಾಕ್ಯವನ್ನು ಸಾರಲು ಹೊರಟರು.”[52] ಬಾಲಕ ಬಾಲಕಿಯರು ಪುರುಷರು ಮತ್ತು ಎಲ್ಲ ಕ್ರೈಸ್ತರು ಇತರರೊಡನೆ ಸುವಾರ್ತೆಯನ್ನು ಹಂಚಿಕೊಂಡರು! “ಸಭೆಯ ಬೆಳವಣಿಗೆ ರಹಸ್ಯದ” ಬಗೆಗೆ

ಇದಕ್ಕಿಂತ ಒಳ್ಳೆಯ ಹೇಳಿಕೆಯನ್ನು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಮಗೆ ಸಿಕ್ಕದು.

ಅಮೇರಿಕಾ ಮತ್ತು ಇತರೆಡೆಯಲ್ಲಿನ ಪ್ರತಿಯೊಬ್ಬ ಕ್ರೈಸ್ತನೂ ಕರ್ತನಿಂದ ತುಂಬಲಟ್ಟವನು ಆಗಿದ್ದು ಆತನು ತಾನು ಭೇಟಿಯಾಗುವ ಪ್ರತಿಯೊಬ್ಬನಿಗೂ ಸುವಾರ್ತೆಯನ್ನು ಹೇಳುವ ದಿವಸವನ್ನು ನಾನು ಎದುರು ನೋಡುವವನಾಗಿದ್ದೇನೆ! ಮತ್ತೊಂದು ಸಾರಿ ಸುವಾರ್ತೆಯ ಜ್ವಾಲೆಯು ಭೂಗೋಳದ ತುಂಬೆಲ್ಲ ಹರಡಬಹುದಾಗಿದೆ.

---

ಟಿಪ್ಪಣಿಗಳು

[1]ಕೆಲವರು ಹೇಳುವುದೇನೆಂದರೆ ಸ್ತೇಫನನ ಪ್ರಸಂಗವು “ಯೆಹೂದಿಗಳ ಕೊನೆಯ ಅವಕಾಶವಾಗಿತ್ತು” ಎಂದು. ಇದೊಂದು ಅತಿಯಾದ ಹೇಳಿಕೆಯಾಗಿದೆ. ಪೌಲ ಮತ್ತು ಇತರ ಯೆಹೂದಿಗಳು ಎಲ್ಲೆಲ್ಲ ಹೋಗುತ್ತಾರೋ ಅಲ್ಲೆಲ್ಲ ಶುಭವಾರ್ತೆಯನ್ನು ಮುಟ್ಟಿಸಲು ಪ್ರಯತ್ನಿಸುವುದನ್ನು ಮುಂದುವರೆಸಿದರು (ಅಪೊಸ್ತಲರ ಕೃತ್ಯಗಳು 28:16-31ರಲ್ಲಿ ಹೇಗೆ ಕೊನೆಗೊಳ್ಳುತ್ತದೆ ಎಂಬುದನ್ನು ಗಮನಿಸಿರಿ). ಇದು ಬಹುಶಃ ಯೆರೂಸಲೇಮನ್ನು ಮುಟ್ಟಲು ದೇವರ ಕೊನೆಯ ಮುಖ್ಯವಾದ ಶ್ರಮ ಆಗಿರಬಹುದು (ಮತ್ತಾಯ 23:37, 38 ಗಮನಿಸಿರಿ). ಮೂವತ್ತು ಅಥವಾ ಅನೇಕ ವರ್ಷಗಳ ನಂತರ, ವೆಸ್ಪೇನಿನ ಮತ್ತು ಟೈಟಸ್‌ನ ಸೈನಿಕರು ಒಂದು ಮಿಲಿಯಕ್ಕಿಂತ ಹೆಚ್ಚಿನ ಜನರನ್ನು ಕೊಲ್ಲುವ ಮೂಲಕ, ಯೆರೂಸಲೇಮನ್ನು ಮತ್ತು ದೇವಾಲಯವನ್ನು ನಾಶಮಾಡಿದರು. [2]ಕಾಲಾಕ್ರಮವು ಮೂರು ಅಥವಾ ನಾಲ್ಕು ವರ್ಷಗಳಿಂದ ಏಳು ಅಥವಾ ಎಂಟು ವರ್ಷಗಳವ ರೆಗೆ ಹೆಚ್ಚೂ ಕಡಿಮೆ ಇರಬಹುದು. [3]ಒಂದು ಊಹೆಯ ಪ್ರಕಾರ ಪಂಚಾಶತ್ತಮ ದಿನದಂದು ಪರಿವರ್ತಿತವಾದವರು ಮನೆಗೆ ಮರಳಿರಬಹುದು ಕೆಲವರು ಯೆರೂಸಲೇಮಿನ ಸುತ್ತಮುತ್ತಲಿನ ಜನರು ವಾಸಿಯಾಗುವುಕ್ಕೋಸ್ಕರ ಜನರನ್ನು ಕರತಂದರು (ಅಪೊಸ್ತಲರ ಕೃತ್ಯಗಳು 5:16). ಕೆಲವರು ಯೇರೂಸಲೇಮಿನ ಸುತ್ತಲೂ ಕೆಲ ಸಭೆಗಳು ಸ್ಥಾಪಿಸಲ್ಪಟ್ಟಿದ್ದಕ್ಕೆ ಆಶ್ಚರ್ಯಪಡುತ್ತಾರೆ. ಹೇಗೋ, ಯೇಸು ಹೇಳಿದಹಾಗೆ ಅಪೊಸ್ತಲರು ಯೆರೂಸಲೇಮಿನಿಂದ ಹೊರಗೆ ಎಂದಿಗೂ ಸಾಕ್ಷಿಗಳಾಗಲಿಲ್ಲ ಎಂದು ನಾವು ಹೇಳಬಹುದು. [4]8:1, 4ರಲ್ಲಿನ ಗ್ರೀಕ ಪದವಾದ “ಚಲ್ಲಾಪಿಲ್ಲಿಯಾಗು” ಎಂಬ ಪದವನ್ನು ಬೀಜಗಳು ಚಲ್ಲಾಪಿಲ್ಲಿಯಾಗಿ ಹೋಗುವುದನ್ನು ಸೂಚಿಸಲು ಗ್ರೀಕರು ಬಳಸುತ್ತಿದ್ದರು. [5]“ಬಾಡಿಗೆಯ ಕೊಲೆಗಾರ (ಹಿಂಸಿಸುವವನು)” ಈತನೊಬ್ಬ ಬಾಡಿಗೆಯ ಕೊಲೆಗಾರನಾಗಿದ್ದನು. ಆದರೆ ಸೌಲನು ಕ್ರೈಸ್ತರನ್ನು ಹಿಂಸಿಸುವುದಕ್ಕೋಸ್ಕರ ಹಣವನ್ನು ತೆಗೆದುಕೊಳ್ಳುತ್ತಿದ್ದನು ಎಂಬುದಾಗಿ ಎಲ್ಲಿಯೂ ಸೂಚನೆಯು ಇಲ್ಲ. ಅವನು ಹಾಗೆ ಮಾಡಿದುದಕ್ಕೆ ಕಾರಣ ತಾನು ಹಾಗೆಯೇ ಮಾಡಬೇಕೆಂದು ಆತನು ತಿಳಿದುಕೊಂಡಿದ್ದನು (ಪುಸ್ತಕದ ನಂತರದಲ್ಲಿ ಬರುವ ಸೌಲನ ಪರಿವರ್ತನೆಯ ಮೇಲಿನ ಪ್ರಸಂಗವನ್ನು ನೋಡಿರಿ). [6]ನಂತರದಲ್ಲಿ ಸೌಲನ ಕ್ರೈಸ್ತರನ್ನು ಸೆರೆಹಿಡಿಯಲು ದಮಸ್ಕಕ್ಕೆ ಹೊರಟಾಗಿ, “ಆತನೊಡನೆ ಪ್ರಯಾಣಿಸುತ್ತಿರುವ ಜನರು” ಒಮ್ಮೆಲೇ ಆತನಿಗೆ ಸಹಾಯ ಮಾಡಿದರು (9:7). [7]ಅಂದರೆ ಹಿಂಸೆಯು ಪ್ರಾರಂಭವಾದಂದಿನಿಂದ, ಕ್ರೈಸ್ತರು ತಮ್ಮ ಸುತ್ತಲಿನ ಪ್ರದೇಶವನ್ನು ಸುರಕ್ಷತೆಗಾಗಿ ತೊರೆದುಬಿಟ್ಟರು ಎಂದರ್ಥವೇ - ಅಥವಾ ಸೌಲ ಮತ್ತವನ ಸಹಾಯಕರು ಅವರನ್ನು ಪಟ್ಟಣದಿಂದ ಹೊರಗೆ ಎಳೆದುಕೊಂಡು ಬಂದರು ಎಂದು ಅರ್ಥಕೊಡುತ್ತದೆಯೋ? ಬಹುಶ ಈ ಎರಡರಲ್ಲೂ ಸ್ವಲ್ಪಮಟ್ಟಿಗೆ ಸತ್ಯಾಂಶವಿರಬಹುದು. [8]“ಎಲ್ಲರಿಗೂ” ಎಂಬ ಪದವು (ಪೇಂಟ್ಸ) ಯಾವಾಗಲೂ ಸಾಮಾನ್ಯವಾದುದನ್ನು ವರ್ಣಿಸುವುದಕ್ಕಾಗಿ ಬಳಸಲ್ಪಡುತ್ತದೆ, ಆದರೆ ಸಂಪೂರ್ಣ ಕಾರ್ಯಕ್ಕಲ್ಲ (J. W. Roberts, *Acts of Apostles*, Part 1 [Austin, Tex.: R. B. Sweet Co., 1967], 59). [9]ಅನೇಕ ಭಾಷ್ಯಕಾರರು, ಹಿಂಸೆಯು ಮುಖ್ಯವಾಗಿ ಗ್ರೀಕ್ ಭಾಷೆಯ ಯೆಹೂದಿಗಳೆಡೆಗೆ - ಸ್ತೇಫನನಂತೆ ಅವರೆಡೆ ಗುರಿಮಾಡಲ್ಪಟ್ಟಿತು ಎಂದು ಯೋಚಿಸುವವರಾಗಿದ್ದಾರೆ. ಹೀಗೆ ಅಪೊಸ್ತಲರು (ಮತ್ತು ಇತರ ಮೂಲ ಯೆಹೂದಿ ಕ್ರೈಸ್ತರು) ಸೌಲ ಮತ್ತವನ ದೇಶದವರಿಂದ ಒಂಟಿಯಾಗಿ ಉಳಿದರು. ಈ ಸ್ಥಿತಿಯನ್ನು ಹಿಡಿದುಕೊಳ್ಳುವವರು ಕೆಲ ಕ್ರೈಸ್ತರು ಯೆರೂಸಲೇಮಿನಲ್ಲಿ ಉಳಿದುಕೊಂಡರು ಎಂದು ಗಮನಿಸುವವರಾಗಿದ್ದಾರೆ (8:2; 9:26; 11:2, 22), ಇದರ ಮೂಲ ಯೆಹೂದಿ ಕ್ರೈಸ್ತರು ಎಂದು ಒಪ್ಪಬಹುದಾಗಿದೆ. ಇನ್ನೊಂದೆಡೆಯಲ್ಲಿ, ಎಲ್ಲ ಕ್ರೈಸ್ತರನ್ನೂ ಪಟ್ಟಣದಿಂದ ಹೊರಹಾಕುವದು ಕಷ್ಟಸಾಧ್ಯವಾಗಿತ್ತು ಮತ್ತು ಅವರಲ್ಲಿ ಅನೇಕರು ಸೌಲನ ಪರಿವರ್ತನೆಯ ನಂತರ ಯೆರೂಸಲೇಮಿನಲ್ಲಿಯೇ ಪುನಃ ಬಂದಿಳಿದರು. ಮುಂದೆ, ಯೆರೂಸಲೇಮಿನಲ್ಲಿ ನಂತರ ಉಳಿದವರಲ್ಲಿ ಬಾರ್ನಬನು ಒಬ್ಬನು (11:22), ಬಾರ್ನಬಸ್‌ನು ಕುಪ್ರದ್ವೀಪದವನು (ಉದಾಹರಣೆ ಆತನು ಗ್ರೀಕ ಭಾಷೆ ಮಾತನಾಡುವವನಾಗಿರಬಹುದು) (4:36). ಇದು 8:1ರ “ಎಲ್ಲರೂ” ಎಂಬುದು “ಯೆರೂಸಲೇ

ಮಿನಲ್ಲಿಯ ಹೆಚ್ಚಾದ ಕ್ರೈಸ್ತರು" ಎಂಬುದರ ಬದಲಾಗಿ "ಯೆರೂಸಲೇಮಿನಲ್ಲಿಯ ಹೆಚ್ಚಿನ ಗ್ರೀಕಭಾಷೆಯ ಕ್ರೈಸ್ತರು" ಎಂದು ಯೋಚಿಸುವುದು ಒಳ್ಳೆಯದು ಎನ್ನಿಸುತ್ತದೆ. [10]"ಮೀಸಲು ಜನರು" ಇದು ಕ್ರೈಸ್ತರಿಗೆ ಇಥವಾ ಕ್ರೈಸ್ತರಲ್ಲಿದವರಿಗೆ ಸೂಚಿತವಾಗುತ್ತದೆ (ಲೂಕ 2:25; ಅಪೊಸ್ತಲರ ಕೃತ್ಯಗಳು 2:5; 22:12). ಇವರಲ್ಲಿ ಎಲ್ಲರೂ ಕ್ರೈಸ್ತರು ಅಲ್ಲದಿದ್ದರೂ ಬಹಳಷ್ಟು ಜನರು ಕ್ರೈಸ್ತರು. ಅಪಾಯದ ಹಿನ್ನಲೆಯಲ್ಲಿಯೇ ಕ್ರೈಸ್ತರು ತಮ್ಮ ಸಹೋದರರನಾದ ಸ್ತೇಫನನನ್ನು ಹೂಣಿಟ್ಟರು ಎಂಬುದಕ್ಕಿಂತ ಅ ಕ್ರೈಸ್ತರು ಆತನನ್ನು ಹೂಣಿಟ್ಟರು ಹೊರತು ಅನ್ಯರು ಅಲ್ಲ.

[11]ಈ ನಿಯಮವು ಬಹುಶಃ ಆರೋನನ ಮಕ್ಕಳು ಸತ್ತಾಗ ಆತನ ಮೇಲೆ ನಿರ್ಬಂಧಿಸಲ್ಪಟ್ಟವುಗಳನ್ನು ಪ್ರತಿಬಿಂಬಿಸುವಂತವುಗಳಾಗಿವೆ (ಯಾಜಕಕಾಂಡ 10:6; ಮತ್ತು ಯೆರೆಮೀಯ 22:19ಸಹ ನೋಡಿರಿ). [12]ಇದೇ ಮೊದಲ ಬಾರಿ ಸ್ತ್ರೀ ಸದಸ್ಯೆಯರು ಹಿಂಸೆಯು ಗುರಿಯಾಗಿದ್ದನ್ನು ನಾವು ನೋಡುವವ ರಾಗಿದ್ದೇವೆ. [13]ಇದರರ್ಥವು ಯೇಸು ಕರ್ತನೆಂಬುದನ್ನು ನಿರಾಕರಿಸುವುದನ್ನು ಅವರಿಂದ ಒಪ್ಪಿಸುವುದಕ್ಕೆ ಪ್ರಯತ್ನಿಸುತ್ತಿದ್ದನು, ಇದು ಆ ಸಮಯದಲ್ಲಿ ಆತನ ಕಣ್ಣಿಗೆ ಅದು ದೇವದೂಷಣೆಯಾಗಿತ್ತು ಮತ್ತು ಮರಣಕ್ಕೆ ಎಡೆಮಾಡುವ ಅಪರಾಧವಾಗಿತ್ತು. ಇದರ ಅರ್ಥವು ಆತನು ಅವರಿಂದ ಯೇಸುವನ್ನು ನಿರಾ ಕರಿಸುವುದನ್ನು ಪಡೆಯಬೇಕೆಂದಿದ್ದನು, ಅದು ಆತನ ದೃಷ್ಟಿಯಲ್ಲಿ ದೇವದೂಷಣೆಯಾಗಿದ್ದು ಆ ಸಮಯದಲ್ಲಿ ಆತನು ಕೊಟ್ಟ ಹೇಳಿಕೆಯು ಅಪೊಸ್ತಲರ ಕೃತ್ಯಗಳು 26ರಲ್ಲಿ ಇದೆ. ಬಹುಶ ನಂತರದಲ್ಲಿ ಅದು ಹೀಗೆ ಅರ್ಥವಾಯಿತು. [14]ಈ ವಿಚಾರಗಳು Rick Atchley, "Victory in Tragedy," Sermon preached at the Southern Hills church of Christ on 21 April 1985 ಈ ವಿಚಾರಗಳು ಎರವಲು ತೆಗೆದುಕೊಳ್ಳಲ್ಪಟ್ಟಿವೆ. [15]"ಸಮಾರ್ಯದವರು" ಪದಕೋಶದಲ್ಲಿ ನೋಡಿರಿ. [16]"ಪೇತ್ರ ಮತ್ತು ಫಿಲಿಪ್ಪರ ಪ್ರಯಾಣಗಳು" ಎಂಬ ನಕಾಶೆಯನ್ನು ನೋಡಿರಿ. [17]ದೈವಶಾಸ್ತ್ರೀಯವಾಗಿ, ಸಮಾರ್ಯವು ಯೆಹೂದಿಗಳಿಂದ ದೂರ ತೆಗೆಯಲ್ಪಡಲಿಲ್ಲ (ವಿಶೇಷವಾಗಿ ಸದ್ದುಕಾಯರು). ಆದರೆ ಅವರ ಮಾಂತ್ರಿಕನಾದ ಸೀಮೋನನನ್ನು ಅವರ ಒಪ್ಪಿಕೊಳ್ಳುವಿಕೆಯು, ಅವರೂ ಸಹ ತಮ್ಮ ವಿಗ್ರಹಾರಾಧಕ ರಾದ ಪಿತೃಗಳ ಸಂಪರ್ಕದಿಂದ ಬಹು ದೂರವಾಗಿ ತೆಗೆಯಲ್ಪಡಲಿಲ್ಲ ಎಂದು ತೋರಿಸುತ್ತದೆ. [18]ಇನ್ನೊಂದು ಮಾತಿನಲ್ಲಿ ಆತನು ಆತ್ಮನ ಬೋಧನೆಗಳಿಗೆ (ಅಪೊಸ್ತಲರ ಮೂಲಕ ಕೊಡಲಾದ) ವಿಧೇ ಯನಾದನು, ಹೀಗಾದ್ದರಿಂದ ಆತನ ಜೀವಿತವು ಆತ್ಮನ ನಿಯಂತ್ರಣದಲ್ಲಿತ್ತು, ಹೀಗೆ ಆತನ ಜೀವಿ ತವು "ಆತ್ಮನ ಫಲಗಳನ್ನು" ಉತ್ಪಾದಿಸಿತು (ಗಲಾತ್ಯ 5:22, 23). [19]ಯೆರೂಸಲೇಮು ದೇಶದ ಉನ್ನತ ಭಾಗದಲ್ಲಿ ನೆಲಸಿದೆ. ಯೆರೂಸಲೇಮಿನಿಂದ ಹೊರಟ ಯಾವುದೇ ಭಾಗವು "ಕೆಳಗೆ" ಆಗಿದೆ (ಗಮನಿಸಿ ವಚನ 15). [20]ಸಬಾಸ್ಟೆಸ್ ಇದು ಗ್ರೀಕಪದವಾದ "ಅಗಸ್ಟಸ್" ಎಂಬುದಕ್ಕೆ ಸಮವಾಗಿದೆ. ಈ ಪಟ್ಟಣವು ಚಕ್ರವರ್ತಿಯ ಗೌರವಕ್ಕಾಗಿ ಆತನ ಹೆಸರಿಂದ ಹೆಸರಿಸಲ್ಪಟ್ಟಿತು.

[21]NIVಯಲ್ಲಿ "ಸಮಾರ್ಯದ ಪಟ್ಟಣ" ಎಂದಿದೆ. ಒಂದು ಸಾಧ್ಯತೆಯುಗಿತ್ತಾ ಆಗಿದ್ದು, ಅದು ಮಾಂತ್ರಿಕನಾದ ಸೀಮೋನನ ಸಾಂಪ್ರದಾಯಿಕ ಮನೆಯಾಗಿತ್ತು. [22]ಅಪೊಸ್ತಲರ ಕೃತ್ಯಗಳು 6:6 ಮತ್ತು 8:18ರ ಮೇಲಿನ ಭಾಷ್ಯವನ್ನು ನೋಡಿರಿ. [23]ಅದ್ಭುತಗಳ ಉದ್ದೇಶವನ್ನು ಮಾರ್ಕ 16:20; ಇಬ್ರಿಯ 2:3, 4ರಲ್ಲಿ ನೋಡಿರಿ. ಫಿಲಿಪ್ಪನು ಮೊದಲು ಅದ್ಭುತಗಳನ್ನು ಮಾಡಿದನು ಮತ್ತು ನಂತರ ಬೋಧಿಸಿದನು. ಇಂದಿನ "ಸ್ವಸ್ಥತೆ ಸೇವೆಗಳು" ಎಂದು ಹೇಳಿಕೊಳ್ಳುವವರು, ಮೊದಲು ಬೋಧನೆ ಯನ್ನು ಮಾಡಿ ಜನಸಮೂಸವನ್ನು ಭಾವನಾತ್ಮಕ ವಾಗಿ ಅಲುಗಾಡಿಸುವರು, ಯಾಕೆಂದರೆ ಬರಲಾಗುವು "ಅದ್ಭುತಗಳಿಗಾಗಿ" ಸಿದ್ಧಮಾಡಲು. [24]ಈ ಪುಸ್ತಕದಲ್ಲಿ ಮುಂದೆ ಸಿಕ್ಕುವ "ದೆವ್ವಗಳು: ಅಸಮಾನ್ಯ ದುಷ್ಟ ಶಕ್ತಿಗಳ ಇರುವಿಕೆ" ಎಂಬ ಪೂರಕ ಲೇಖನವನ್ನು ನೋಡಿರಿ. [25]ದೆವ್ವಹಿಡಿದ ವ್ಯಕ್ತಿಗಳು ಮತ್ತು ದೈಹಿಕ ಅಸ್ವಸ್ಥತೆ ಹೊಂದಿದ ವ್ಯಕ್ತಿಗಳ ಮಧ್ಯ ವ್ಯೆತ್ಯಾಸವನ್ನು ಲೂಕನು ಭಿನ್ನತೆಯನ್ನು ಮಾಡುವುದನ್ನು ಗಮನಿಸಿರಿ. [26]"ಮಂತ್ರತಂತ್ರಗಳನ್ನು ಅಭ್ಯಸಿಸುವದು" (ಜಾದುಗಾರ) ಎಂಬ ಗ್ರೀಕ ಪದವು "ಮಗ್ಗಾಯ್" ಎಂಬುದಕ್ಕೆ ಸಂಬಂಧಿತವಾಗಿದೆ (ಮತ್ತಾಯ 2:1). ಹೀಗೆ ಸೀಮೋನನು ಯಾವಾಗಲೂ "ಮಾಗಸ್ ಸಿಮೋನ" ಎಂದೇ ಸೂಚಿತನಾಗುತ್ತಿದ್ದನು. [27]ಸರ್ಕಸ್ಸನ ಹೆಸರಾಂತ P. T. Barnum, of Barnum & Bailey ಜೀವಿಸುವುವತನಕ ಶ್ರೇಷ್ಟ ಪ್ರದರ್ಶನಕಾರನಾಗಿದ್ದನು. ಸೀಮೋನನ ಮಂತ್ರಗಳೂ ಮತ್ತು ಫಿಲಿಪ್ಪನ ಅದ್ಭುತಗಳ ಮಧ್ಯ ಅನೇಕ ವ್ಯತ್ಯಾಸಗಳನ್ನು ಗಮನಿಸಬಹುದು. ಇನ್ನಿತರ ಸಂಗತಿಗಳಲ್ಲಿ, ಫಿಲಿಪ್ಪನು ಮಾಡಿದವುಗಳಲ್ಲಿ ಪ್ರಾಯೋಗಿಕ ಸ್ವಭಾವವಿದೆ. ಆತನು ಜನರನ್ನು ಸ್ವಸ್ಥಮಾಡಿದನು ಜನರನ್ನು ಸಂತೋಷಗೊಳಿಸಿದನು ಸೀಮೋನನು ಜನರನ್ನು ವಂಚಿಸಿದನು ಮತ್ತು ಅವರು ಹೆದರುವಂತೆ ಮಾಡಿದನು. ಇತರ ವ್ಯತ್ಯಾಸಗಳಿಗಾಗಿ ಈ ಪುಸ್ತಕದ ನಂತರದಲ್ಲಿ ಕಂಡುಬರುವ ಪ್ರಸಂಗದಲ್ಲಿನ ಮಂತ್ರವಾದಿಯ ಪರಿವರ್ತನೆಯನ್ನು ನೋಡಿರಿ. [29]ಫಿಲಿಪ್ಪನ ಮಾಡಿದ ಅದ್ಭುತಗಳ ಬಗೆಗೆ ಸೀಮೋನನ ಆಶ್ಚರ್ಯವೇ ಅಧಿಕೃತ ಕಾರ್ಯಕ್ಕೆ ಬಲಯುತವಾದ ಸಾಕ್ಷಿಯಾಗಿದೆ. ಒಂದು ವೇಳೆ ಫಿಲಿಪ್ಪನು ಜನತೆಯನ್ನು ವಂಚಿಸಲು ಕೀಳುತರದ ತಂತ್ರಗಳನ್ನು ಬಳಸಿದ್ದಾದರೆ (ಕೆಲ

ವಿಮರ್ಷಕರು ಸೂಚಿಸುವಂತೆ), ಸೀಮೋನನು ಕ್ಷಣದಲ್ಲಿಯೇ ಅವುಗಳನ್ನು ಕಂಡುಹಿಯುತ್ತಿದ್ದನು. [30]ಯೋಹಾನನೂ ಕಳಿಸಲ್ಪಟ್ಟವರಲ್ಲಿ ಒಬ್ಬನು, ಎಂಬ ನಿಜಾಂಶದಲ್ಲಿ ಒಂದು ವ್ಯಂಗ್ಯದ ಲೇಪನವಿದೆ. ಸಮಾರ್ಯದ ಮೊದಲ ಪ್ರಯಾಣದಲ್ಲಿ, ಸಮಾರ್ಯಕ್ಕೆ ಬೆಂಕಿಬೀಳಲಿ ಎಂಬ ಇಚ್ಛೆಯನ್ನು ಆತನು ಹೊಂದಿದವನಾಗಿದ್ದನು (ಲೂಕ 9:52-54).

[31]ದೇವರು ಮುಂದಾಲೋಚನೆಯಿಂದ ಅದ್ಭುತೀಯವವಲ್ಲದ "ಆತ್ಮನ ವರಗಳನ್ನು" ನಿಲ್ಲಿಸಿದನು ಎಂಬುದು ಸಮಾರ್ಯದಿಂದ ಮತ್ತು ಪೇತ್ರ ಮತ್ತು ಯೋಹಾನರ ಸಮಾರ್ಯಕ್ಕೆ ವಿಷೇಶ ಭೇಟಯಾಗಿದೆ, ಇದು "ಸಾಮಾನ್ಯವಾದ ಅಳತೆಯಲ್ಲಿ" ಸಮಾರ್ಯದ ಮೇಲೆ ಆತ್ಮನ ಕೊಡುವಿಕೆಯ "ಆಚರಣೆ" ಇವು ಅವರೂ ಸಹ ದೇವರಿಂದ ಮಾನ್ಯತೆ ಹೊಂದಿದವರು ಎಂದು ತೋರಿಸುವುದು ಆಗಿದೆ. ಸಮಾರ್ಯದವರು ದೇವರಿಂದ ಮಾನ್ಯತೆಹೊಂದಿದವರು ಎಂಬುದನ್ನು ತೋರಿಸಲು ಪೇತ್ರ ಮತ್ತು ಯೋಹಾನರು ಬಯಸಿದ್ದರು ಎಂಬುದನ್ನು ನಾನು ಒಪ್ಪುತ್ತೇನೆ, ಆದರೆ (1) ದೇವರು ಅಂಥ ಅವಶ್ಯ ವಾದ ಆಶೀರ್ವಾದಗಳನ್ನು ದೀಕ್ಷಾಸ್ನಾನಹೊಂದಿದವರಿಂದ ತಡೆಹಿಡಿದನು ಎಂಬುದು ಅಸಂಭಾವ್ಯವಾ ದದು. "ಯಾವನಿಗಾದರೂ ಕ್ರಿಸ್ತನ ಆತ್ಮವು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ" (ರೋಮಾಪುರ 8:9). ಪೇತ್ರ ಮತ್ತು ಯೋಹಾನರು ಅಲ್ಲಿ ತಲಪುವತನಕ ಸಮಾರ್ಯದವರು ಕ್ರಿಸ್ತನಿಗೆ ಒಳಗಾಗಿರಲಿಲ್ಲವೇ? (2) ಒಬ್ಬನು ಆತ್ಮನ "ಸಾಮಾನ್ಯವಾದ ವರವನ್ನು" ಪಡೆಯುವವರೆಗೆ, ಅಲ್ಲಿ ಚಿನ್ಹೆಯು ಜೊತೆಗೂಡುವುದಿಲ್ಲ, ಎಲ್ಲ ಜನರೂ ನಿಜವಾಗಿಯೂ ಪೇತ್ರ ಮತ್ತು ಯೋಹಾನರು ಜನರ ಮೇಲೆ ಕೈಯಿಡುವುದನ್ನು ದೇವರು ಸಮಾರ್ಯದವವರನ್ನು ಸ್ವೀಕರಿಸಿದ್ದನು ಎಂಬುದನ್ನು ಯೆಹುದಿ ಅಥವಾ ಸಮಾರ್ಯದವರ ಮೇಲೆ ಹೇಗೆ ಪ್ರಾಯೋಗಿಸಬಹುದು? ಈ ಒಂದು ಸಂದರ್ಭದಲ್ಲಿ ಕಾಣುವಂತಹ ಅದ್ಭುತೀಯ (ಕಂಡುಬರುವಂತಹ) ವರಗಳ ಪ್ರದರ್ಶನ ಈ ಸಂದರ್ಭಕ್ಕೆ ಸಮಂಜಸವಾಗಿದೆ ಆದರೆ ಆತ್ಮನ ಇರುವಿಕೆಯ ವರವನ್ನು ನೀಡಲಾಗಲಿಲ್ಲ. [32]ನಿಜಾಂಶವೆಂದರೆ ಫಿಲಿಪ್ಪನು ಅದ್ಭುತಗಳನ್ನು ಮಾಡುವ ಸಾಮರ್ಥದಲ್ಲಿ ಸಾಗದಿರುವದು ಮುಂದೆ ಸೀಮೋನನು ಜನರ ಮೇಲೆ ಕೈಯಿಡುವ ಸಾಮರ್ಥವನ್ನು ಕೊಳ್ಳಲು ಪ್ರಯತ್ನಿಸಿದ್ದು ಫಿಲಿಪ್ಪನಿಂದಲ್ಲ ಬದಲಾಗಿ ಅಪೊಸ್ತಲರಿಂದ ಎಂಬ ನಿಜಾಂಶವನ್ನು ಒತ್ತಿ ಹೇಳುತ್ತದೆ. "ಫಿಲಿಪ್ಪನು ಇಂಥ ವರಗಳನ್ನು ಹೊಂದಿಕೊಂಡಿರಲಿಲ್ಲ, ಸೀಮೋನನು ಅಪೊಸ್ತಲರಿಂದ ಕೊಳ್ಳಲು ಪ್ರಯತ್ನಿಸಲಿಲ್ಲ ಎಂಬುದು ನಂಬಲು ಅನರ್ಹವಾದುದು" (ಕಾಫಮ್ಯಾನ್, 164). [33]ನಾನು ಈ ಬಲವಾದ ವಾದವನ್ನು ನಂಬುವವನಾಗಿದ್ದೇನೆ, ಮತ್ತು ಅವುಗಳನ್ನು ಮಾಡಲು ನಾನು ಹಿಂಜರಿಯುವುದಿಲ್ಲ. ಮತ್ತು ಅದೆ ಸಮಯದಲ್ಲಿ, ನಾನು ಅದ್ಭುತೀಯ ವರಗಳು ಕೊನೆಗೊಳ್ಳುವವೂ ಇಲ್ಲವೋ ಎಂಬ ಪ್ರಶ್ನೆಯನ್ನು ನಾನು ಅರಿತುಕೊಂಡಂತೆ, ಅದ್ಭುತೀಯ ವರಗಳು ಅಪೊಸ್ತಲರು ಕೈಯಿಡುವುದರಿಂದಲೇ ಮಾತ್ರ ದಾನವಾಗಿ ಬರುವವು ಎಂಬ ಅನಿಸಿಕೆಯ ಮೇಲೆ ಆತುಕೊಂಡಿಲ್ಲ. ಅದ್ಭುತೀಯ ಶಕ್ತಿಗಳು ಕೊನೆಗೊಂಡಿದ್ದವು ಎಂಬುದನ್ನು ಸಾಧಿಸಲು ಬಲಯುತವಾದ ವಾದಗಳು ಇವೆ. [34]ಸಮಾರ್ಯದವರಿಗೆ ಬೋಧಿಸುವದು ಎಂಬುದು ಅನ್ಯಜನರಿಗೆ ಬೋಧನೆ ಕ್ರೋ ಧವನ್ನು ಸೃಷ್ಟಿಸಲಿಲ್ಲ, ಯೇಸುವು ಸಮಾರ್ಯದವರನ್ನು ಒಪ್ಪಿಕೊಳ್ಳುವಿಕೆಯು (ಯೋಹಾನ 4:1-42) ಬಹುಶ ಇಲ್ಲಿ ಒಂದು ಅಂಶವಾಗಿದೆ, ಈ ನಿಜಾಂಶದೊಡನೆ ಸಮಾರ್ಯದವರು ನಂಬಿಕೆಯಿಟ್ಟರು ಮತ್ತು ಸುನ್ನತಿಯನ್ನು ರೂಡಿಸಿಕೊಂಡರು (11:1, 2). [35]"ಪರಿಶುದ್ಧಾತ್ಮವು ಅವರ ಮೇಲೆ ಬರುವಂತೆ, ಪೇತ್ರ ಮತ್ತು ಯೋಹಾನರು ಅವರಿಗಾಗಿ ಪ್ರಾರ್ಥಿಸಿದರು" ಎಂದು ವಚನ 15 ಹೇಳುತ್ತದೆ, ಪ್ರಾರ್ಥನೆಯು ವಿಷೇಶ ವರಗಳ ದಾನವನ್ನು ಪಡೆಯಲು ಇರುವಂಥ ಅಪೊಸ್ತಲರು ಸೂಚಿಸಿದ ಇನ್ನೊಂದು ಮಾರ್ಗ ಎಂದು ಕೆಲವರು ಸೂಚಿಸುತ್ತಾರೆ. ಯಾವ ಆಯ್ಕೆಯೂ ಇಲ್ಲಿಲ್ಲ. ಏಳು ಜನರ ಮೇಲೆ ಅಪೊಸ್ತಲರ ಕೈಯಿಡುವ ಮುನ್ನ, ಅವರು ಪ್ರಾರ್ಥಸಿದರು (6:6). ಪ್ರತಿಯೊಂದು ಸಂದರ್ಭದಲ್ಲಿ ಪ್ರಾರ್ಥಿಸುವದು ಅಪೊಸ್ತಲರ ಅಭ್ಯಾಸವಾಗಿತ್ತು (1:14, 24; 4:24). ಹೇಗೋ, ಕೈಗಳನ್ನಿಡುವುದರ ಮೂಲಕ ವರಗಳನ್ನು ದಾನಮಾಡುವದು ಎಂಬುದು ವಾಕ್ಯಭಾಗದಲ್ಲಿ ಸ್ಪಷ್ಟವಾಗಿದೆ (8:18). [36]ಸೀಮೋನನ ಪ್ರಯತ್ನವು ದೇವರ ವರವನ್ನು ಹಣದಿಂದ ಕೊಳ್ಳುವದೇ ಆಗಿದ್ದು ಇದು ಇಂಗ್ಲೀಷ ಭಾಷೆಯಲ್ಲಿ "ಸೀ ಮೊನೇ" ಎಂದು ಪರಿಚಯಿಸಲ್ಪಟ್ಟಿದೆ. "ಸೀಮೊನೇ" ಎಂಬುದು (ಮಧ್ಯಯುಗದಲ್ಲ ಪ್ರಚಲಿತವಿದ್ದ ಪಾಪವಾಗಿದೆ) ಚರ್ಚಿನ ಕಚೇರಿಯನ್ನು ಮತ್ತು ಸೌಲಭ್ಯಗಳನ್ನು ಕೊಳ್ಳುವುದನ್ನು ಸೂಚಿಸುವುದಾಗಿದೆ. [37]ಪೇತ್ರನ ಮಾತುಗಳು ಇಂಗ್ಲೀಷನಲ್ಲಿ ಸೂಚಿಸಿದ್ದಕ್ಕಿಂತ ಬಲಯುತವಾಗಿವೆ. "ನಿನ್ನ ಬೆಳ್ಳಿಯೂ ನಿನ್ನ ಕೂಡ ಹಾಳಾಗಿ ನಿತ್ಯವಾಗಿ ಹೋಗಲಿ." ಇದರರ್ಥ ಪೇತ್ರನೂ ಒಮ್ಮಲೇ ಸೀಮೋನನನ್ನು ನರಕಕ್ಕೆ ಒಪ್ಪಿಸಿದನು ಎಂದರ್ಥವಲ್ಲ ವಚನ 22ರಲ್ಲಿ ಸೀಮೋನನು ಕ್ಷಮಿಸಲ್ಪಡಬಹುದು ಎಂಬ ಸಾಧ್ಯತೆಯನ್ನು ಪೇತ್ರನು ಒಪ್ಪಿಕೊಳ್ಳುತ್ತಾನೆ. [38]ಈ ಪ್ರಕರಣವು "ದೇವರ ವರ"ವು ಅದ್ಭುತಗಳನ್ನು ಮಾಡುವ ವರಕ್ಕೆ ಸೂಚಿಸುವುದಿಲ್ಲ. ಆದರೆ ಸಾಮರ್ಥ್ಯವನ್ನು ನೀಡುವ ವರವಾಗಿದೆ. (ಪರಿಶುದ್ಧಾತ್ಮದಿಂದ ದೀಕ್ಷಾಸ್ನಾನಹೊಂದಿದಾಗ ಈ ವರವು ಅಪೊಸ್ತಲರಿಗೆ ಕೊಡಲ್ಪಟ್ಟಿತು.) [39]"ಈ ವಿಷಯವು" ಎಂಬ

ಪಾರಿಭಾಷೆಯು ಅಸ್ಪಷ್ಟತೆಯುಳ್ಳದ್ದಾಗಿದೆ. ಇದು NIVಯಲ್ಲಿ "ಸೇವೆ" ಎಂದಿದೆ (ಉದಾಹರಣ, ಜನರ ಮೇಲೆ ಕೈಯಿಡುವ ವಿಷಯ). ಇದು ಬಹುಶ ಪೇತ್ರನು ರಕ್ಷಣೆಯ ವಿಷಯದ ಬಗೆಗೆ ಸೂಚಿಸಿದ್ದಾಗಿರಬಹುದು, ಉದಾಹರಣೆಗೆ "ಸುವಾರ್ತೆಯ ಆಶೀರ್ವಾದ" (I. Howard Marshall, *The Acts of the Apostles*, The Tyndale New Testament Commentaries, gen. ed. R. V. G. Tasker [Grand Rapids, Mich.: Wm. B. Eerdmans Publishing Co., 1980], 159). "ಒಂದು ವೇಳೆ ಆತನ ಹೃದಯವು ದೇವರೊಂದಿಗೆ ಸರಿಯಾಗಿರದಿದ್ದರೆ, ಆತನಿಗೆ ಪರಿಶುದ್ಧಾತ್ಮನೊಂದಿಗೆ ಪಾಲ್ಗೊಳ್ಳುವ ಕಾರ್ಯದಲ್ಲಿ ಭಾಗವೂ ಇಲ್ಲ, ಪಾಲೂ ಇಲ್ಲ (J. W. McGarvery, *New Commentary on Acts of Apostles*, vol. 1 [Delight, Ark.: Gospel Light Publishing Co., n.d.], 147). [40]ಅಕ್ಷರಸಹ, ಇದರ ಅರ್ಥವು "ನಿನ್ನ ಹೃದಯವು ನೇರವಾಗಿಲ್ಲ" ಎಂದು ಉದಾಹರಣೆಗೆ ಇದು ಮೋ ಸಗಾರನ ಹೃದಯವಾಗಿದೆ.

[41]ಪೇತ್ರನ ಬಲವಾದ ಮಾತುಗಳು ಸತ್ಯದಲ್ಲಿ ಮಹತ್ವವಾದವುಗಳು ಎಂದು ಗೆರೆ ಎಳೆಯಲ್ಪಟ್ಟವುಗಳಾಗಿವೆ; ಅಲ್ಲಿ ಪಾಪಿಗಳೊಡನೆ "ಬಲವಾಗಿರುವಂತೆ" ಅಲ್ಲಿ ಸಮಯವೂ ಮತ್ತು ಸ್ಥಳವೂ ಇದೆ, ನಿರ್ಧಿಷ್ಟವಾಗಿ ತಿಳಿಯದ ಹಾಗೆ, ಪಾಪಿಯನ್ನು ಹಿಂದುಮುಂದೆ ನೋಡದೇ ನರಕದಲ್ಲಿ ಬೀಸಿ ಒಗೆಯ ಲಾಗುತ್ತದೆ. [42]ಪೇತ್ರನು ನಂತರದಲ್ಲಿ 2 ಪೇತ್ರನು 2:20-22ನ್ನು ಬರೆಯುವಾಗ ಸೀ ಮೋನನನ್ನು ಬಹುಶ ತನ್ನ ಮನದಲ್ಲಿ ಇಟ್ಟುಕೊಂಡಿರಬಹುದು. [43]"ಮೈಯನ್ನು ಜಜ್ಜು" ಎಂಬುದು ಸ್ವಶಿಸ್ತಿನ ಒಂದು ರೂಪಕವಾಗಿದ್ದು. ಪೌಲನು ತನ್ನ ದೇಹವನ್ನು ದುಷ್ಟಕಾರ್ಯಕ್ಕಾಗಿ ಒಪ್ಪಿಸಲಿಲ್ಲ (1 ಕೊರಿಂಥ 6:19; 3:16, 17). [44]ಒಂದು ವೇಳೆ ಇದು ಯೋಗ್ಯವೆನಿಸಿದರೆ ಕರ್ತನಲ್ಲಿ ಮತ್ತು ಆತನ ಸಭೆಗೆ ಆತನು ಹೋಗುವಾಗ ತಪ್ಪಿಹೋಗದಂತೆ ಮರಳಿತರುವುದಕ್ಕೆ ಮತ್ತು ತಪ್ಪು ಮಾಡುವ ಕ್ರೈಸ್ತನೊಂದಿಗೆ ನೀನು ಸ್ವಲ್ಪ ಸಮಯವನ್ನು ಕಳೆಯುವದು ಅವಶ್ಯವಿದೆ (ಗಲಾತ್ಯ 6:1; ಯಾಕೋಬ 5:19, 20). [45]ಈ ಹಿಂದೆ ಸೂಚಿಸಿದಂತೆ, ಮುಂಚಿನ ಪ್ರಕಾರ, ಕಾಲ್ಪನಿಕ ಕಥೆಗಳ ಪ್ರಕಾರ ಸೀಮೋನನು ಪಶ್ಚಾತ್ತಾಪಡಲಿಲ್ಲ ಆದರೆ, ಅನೇಕ ಸುಳ್ಳು ಬೋಧನೆಗಳ ಆಧಾರದ ಪ್ರಕಾರ ಸೀಮೋನನು ಪೇತ್ರನ ಬದ್ಧ ವೈರಿಯಾದನು. ನಿಕೋಲಸನ ಹೆಸರಿನಂತೆ ಸೀಮೋನನ ಹೆಸರು ಸುಳ್ಳು ಬೋಧಕರಿಂದ ಯೋಗ್ಯವಾದುದು ಆಗಿದೆ, ಎಂಬುದರ ಕಡೆಗೆ ನಾನಿದ್ದೇನೆ. ಹೇಗೋ, ಸೀಮೋನನು ನಿಜವಾಗಿ ಪಶ್ಚಾತ್ತಾಪಟ್ಟನೋ ಅಥವಾ ಇಲ್ಲವೂ ಅದು ಆತನು ಪರಿವರ್ತನೆ ಹೊಂದಿ ಬಿದ್ದನೋ ಎಂಬ ಪ್ರಶ್ನೆಗೆ ಯಾವ ಪರಿಣಾಮವೂ ಆಗದು, ಅಥವಾ ಆತನು ಪಶ್ಚಾತ್ತಾಪಪಟ್ಟು ಮತ್ತೇ ಹಿಂತಿರಿಗಿದನೋ ಎಂಬ ಪ್ರಶ್ನೆಗೆ ಯಾವ ಪರಿಣಾಮವೂ ಆಗದು. [46]"ಪ್ರಮಾಣಕರಿಸುವದು" ಇದೊಂದು ಕ್ರಿಯಾಪದವಾಗಿದ್ದು ಈ ಪದವು ಅಪೊಸ್ತಲರ ಕೃತ್ಯಗಳು "ಸಾಕ್ಷಿಕೊಡುವದು" ಎಂಬ ಪದದಿಂದ ಭಾಷಾಂತರವಾಗಿದೆ. [47]"ಫಿಲಿಪ್ಪ ಮತ್ತು ಪೇತ್ರರ ಪ್ರಯಾಣಗಳು" ಎಂಬ ನಾಕಾಶೆಯನ್ನು ನೋಡಿರಿ. ಒಂದಿಲ್ಲ ಒಂದು ಮಾರ್ಗದಿಂದ, ಯಾಕೋಬನ ಭಾವಿಯ ಹತ್ತಿರ ಯೇಸು ಭೇಟಿಯಾದ ಹೆಂಗಸಿಗೆ "ಜೀವಕರ ನೀರಿನ" (ಯೋಹಾನ 4:10-15) ಬಗೆಗೆ ಕಲಿಯುವ ಸೌಭಾಗ್ಯವು ದೊರೆತಿತ್ತು. [48]ಹೀಗಿದ್ದಾಗ್ಯೂ ಈ ಸಭೆಗಳಲ್ಲಿ ಮಾತವಲಂಬಿಗಳು ಇರುವುದನ್ನು ನಾವು ಓದುತ್ತೇವೆ (6:5), ಮತಾವಲಂಬಿಗಳು ಪರಿವರ್ತನೆಯಾದ ವಿವರಗಳನ್ನು ನಾವು ಹೊಂದಿಲ್ಲ. ಇದು ಪುಸ್ತಕದ ನಂತರದ ಪಾಠಗಳಲ್ಲಿ ಚರ್ಚಿಸಲಾಗುವದು. [49]ಕಂಚಿಕಿಯೊಬ್ಬನು ಎಥಿಯೋಪ್ಯದಲ್ಲಿ ಸೂವಾರ್ತೆಯನು ಪರಿಚಯಿಸಿದನು, ನಾವು ಆ ರೀತಿ ಯ ಸಂಪ್ರದಾಯವನ್ನು ಹೊಂದಿರದಿದ್ದರೂ ಕೂಡಾ, ಒಬ್ಬ ಕಂಚುಕಿಯು ಇತರ ಕ್ರೈಸ್ತರು ಮಾಡುವಂತೆ ಮಾಡಿದನು ಎಂಬುದನ್ನು ನಾವು ಅರಿತುಕೊಳ್ಳಬೇಕೆಂದು ಲೂಕನು ಬಯಸುವವನಾಗಿದ್ದಾನೆ (8:4). [50]ನೀವು ಬೋಧಕರಿಗೆ ಸಂಬಳವನ್ನು ಕೊಡುವದು ಸತ್ಯವೇದಕ್ಕನುಗುಣವಾಗಿದೆ (1 ಕೊರಿಂಥ 9) ಹೀಗಾದರೆ ಅವರು ಸಂಪೂರ್ಣವಧಿಯಲ್ಲಿ ಕಾರ್ಯವನ್ನು ಮಾಡುವವರಾಗಿರುತ್ತಾರೆ, ಆದರೆ ನಾವು ನಮ್ಮ ಕೆಲಸವನ್ನು ಮಾಡಲು ಬೋಧಕರಿಗೆ ಹಣವನ್ನು ಕೊಡುವುದಿಲ್ಲ.

[51]ಪ್ರತಿಯೊಂದೂ ಸೂಚನೆಯೂ ಅಪೊಸ್ತಲರು ತಮ್ಮ ಶ್ರಮದ ಎಲ್ಲ ಸಮಯವನ್ನು ಮೀಸ ಲಾಗಿಟ್ಟಿದ್ದರು ಮತ್ತು ಅವರು ಹಾಗೂ ಅವರ ಕುಟುಂಬಗಳು ಸಭೆಯಿಂದ ಪೋಶಣೆಗೆ ಒಳಗಾಗಿದ್ದವು (3:6; 6:4; 1 ಕೊರಿಂಥ 9:1-6) ಎಂದು ಸೂಚಿಸುತ್ತದೆ. [52]ಭಾಷಾಂತರವಾದ "ಬೋಧಿಸು" ಎಂಬ ಪದವು ಸಾರ್ವಜನಿಕೆ ಘೋಷಣೆಗೆ ಸೀಮಿತವಾಗಲ್ಲ. 1 ತಿಮೊಥೆಯ 2 ಮತ್ತು 1 ಕೊರಿಂಥ 14ರ ಪ್ರಕಾರ ಸ್ತ್ರೀಯರು ಈ ಖಾಸಗಿ ವೈವಸ್ಥೆಯನ್ನು ಮಾಡಿರಬಹುದು. ಕ್ರೈಸ್ತ ಸ್ತ್ರೀಯರು ಏನು ಮಾಡಿದರು ಎಂಬುದುರ ಉದಾಹರಣೆಯನ್ನು ನೋಡಿರಿ ಅಪೊಸ್ತಲರ ಕೃತ್ಯಗಳು 18:26.